ಅಪರಂಜಿ

ನವೆಂಬರ್ 2003

ತಿಳಿನಗೆಯ ಕಾರಂಜಿ



ಪ್ರಕಾಶ್
ಶ್ರೀನಿವಾಸ ವೈದ್ಯ
ಅ.ರಾ. ಮಿತ್ರ
ಶ್ಯಾಮಲ ರವಿಶಂಕರ್
ಕಂ.ಭಂ. ಕೃಷ್ಣಮೂರ್ತಿ
ಪ್ರಕಾಶ್
ಶೋಭಾ ಪ್ರಮೋದ್
ವಿಜಯ ಸಚ್ಚಿದಾನಂದ
ಎಚ್. ಗೋಪಾಲಕೃಷ್ಣ
ಬೇಲೂರು ರಾಮಮೂರ್ತಿ
ವೈ.ಎನ್. ಗುಂಡೂರಾವ್
ಮಂದಗೆರೆ ನಾಗೇಶ್
ಕಮಲಾ ರಾಮಸ್ವಾಮಿ
ಧೃತಿ

ಬಿಡಿ ಪ್ರತಿ: ರೂ. 5.00





ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ನವೆಂಬರ್ - 2003 ಸಂಚಿಕೆ - 2

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



○ ಪ್ರಕಾಶ್

ಮಿನಿ ವಿಧಾನಸೌಧ ಶೀಘ್ರದಲ್ಲಿ ರೆಡಿ
- ಸುದ್ದಿ

ಅಲ್ಲಿಯ ಮಾಮೂಲುಗಳೂ ಸಹ 'ಮಿನಿ'ಯೋ??

★★★

ದೇವೇಗೌಡರಿಂದಲೇ ಜನತಾದಳ ಬಣ ವಿಲೀನಕ್ಕೆ ಅಡ್ಡಿ
- ಸುದ್ದಿ

So what else is new?

★★★

'ಪಾಟ್ನದ ರಸ್ತೆಗಳನ್ನು ಹೇಮಮಾಲಿನಿಯ ಕೆನ್ನೆಗಿಂತ ನುಣುಪಾಗಿ ಮಾಡುತ್ತೇನೆ'
- ಲಾಲೂ ಪ್ರಸಾದ್

ರಾಬ್ರಿಯವರು ಕೆನ್ನೆಮುಟ್ಟಿ ನೋಡಿಕೊಂಡರಂತೆ!!

★★★

ವಿದ್ಯಾರ್ಥಿಗಳಿಗೆ ಮೊಬೈಲ್ ಸೇವೆ; ಬಿ.ಎಸ್.ಎನ್.ಎಲ್. ಯೋಜನೆ
- ಪತ್ರಿಕೆ

ಇದರಿಂದ ವಿದ್ಯಾಭಿವೃದ್ಧಿ ಆಗುತ್ತೆ ಎಂಬುದು ಖಚಿತ!!

★★★

ರೈತರ ಆರೋಗ್ಯ ಕಾಪಾಡಲು ಯಶಸ್ವಿನಿ ವಿಮಾ-ಯೋಜನೆ
- ಸುದ್ದಿ

ಯಾರ ಯಶಸ್ಸು ಎಂಬುದು ಕೇಳಬೇಕಾದ ಪ್ರಶ್ನೆ!!

★★★

ಮೂರನೆಯ ಬಾರಿಗೆ ಪೋಲೀಸ್ ಇನ್ಸ್‌ಪೆಕ್ಟರ್ ಅಮಾನತು

- ಸುದ್ದಿ

ಮರಳಿ ಯತ್ನವ ಮಾಡು....!!

★★★

ಭ್ರಷ್ಟಾಚಾರ ಏಷ್ಯದ ಮಣ್ಣಿನ ಗುಣ - ಅಂತರರಾಷ್ಟ್ರೀಯ ಸಂಸ್ಥೆ

ಮರಳಿ ಮಣ್ಣಿಗೆ....!

★★★

ಅವಕಾಶದ ಒತ್ತಡಕ್ಕೆ ಗೀಚಿದ್ದು ಕವಿತೆಯಲ್ಲ

- ಹೇಳಿಕೆ

ಈ ಸತ್ಯ ಎಲ್ಲರಿಗೂ ಗೊತ್ತಾದರೆ, ಪೇಪರ್ Shortage ಬರೋದಿಲ್ಲ!!


★★★

ಎರಡು ಚತುಷ್ಪದಿಗಳು

ಅಸುರರ ಕಾಟ ಅಂದು ದೇವತೆಗಳಿಗೆ ತಪ್ಪಲಿಲ್ಲ
ಸುರರಿದ್ದೆಡೆ ಅಸುರರು ಬೆಳಕಿದ್ದೆಡೆ ಕತ್ತಲಿನಂತೆ
ಎಲ್ಲರಲೂ ಇರುವುದಂತೆ ಅಷ್ಟಿಷ್ಟು ಅಸುರಗುಣ
ಅದನ್ನೇ ಬೆಳೆಸಿಕೊಂಡು ಹಾಸ್ಯಾಸುರರಾಗೋಣ

ಅಭ್ಯರ್ಥಿಗಳಾಗಿ ಬಂದಿಹೆವು ನಾವಿಲ್ಲಿಗೆ
ಒಬ್ಬೊಬ್ಬರ ಆಯ್ಕೆ, ಸ್ಥಾನ, ಒಂದೊಂದು ರೀತಿ
ಸಿಗುವುದು ಗುಣ ನಡತೆಗೆ ತಕ್ಕಂಥೆ ಸ್ಥಾನ
ಅದ ಉಳಿಸಿಕೊಳ್ಳಲು ಮಾಡಿ ಆಗಾಗ ಹಾಸ್ಯವಧಾನ

- ಬೇಲೂರು ರಾಮಮೂರ್ತಿ



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ

– ಶ್ರೀನಿವಾಸ ವೈದ್ಯ

ನನ್ನಂತಹ ಸಾಮಾನ್ಯರ ಮಾತಿನಲ್ಲಿ ಉತ್ತಮ ಸಾಹಿತ್ಯದ ಒಂದು ಲಕ್ಷಣವೆಂದರೆ "It should linger longer in the reader's mind". ಎಂದರೆ ಓದುಗನ ಮನದಾಳದಲ್ಲಿ ಕೃತಿಯ ನೆನಪು ಗಟ್ಟಿಯಾಗಿ ತಳವೂರಿ ಆಗೀಗ ಸುಖಾವಾಸವಾದ ಬುದ್ಬುದಗಳನ್ನು ಕಲಕುತ್ತಿರಬೇಕು.

ಅ.ರಾ. ಮಿತ್ರರ ''ಆರತಕ್ಷತೆ'' ಅಂತಹ ಒಂದು ಕೃತಿ. ಈ ಪ್ರಬಂಧವನ್ನು ಓದುತ್ತಾ ಓದುತ್ತಾ ಹೋದಂತೆ, ನೀವು ಯಾವುದೋ ಒಂದು ಭರ್ಜರಿಯಾದ ಆರತಕ್ಷತೆಯ ವೈಭವದ ಮಧ್ಯ, ಆ ಸಂಭ್ರಮದ ಸಡಗರದ ಒಂದು ಭಾಗವೇ ಆಗಿದ್ದೀರೇನೋ ಎಂದು ಭಾಸವಾಗುತ್ತದೆ.

ನೀವು ಆರೋಗ್ಯವಂತ ಪುರುಷ ಓದುಗರಾಗಿ ತುಸು ರಸಿಕರಾಗಿದ್ದರೆ ನಿಮ್ಮ ಸುತ್ತ ನೆರೆದ ಹತ್ತಾರು ಹೇಮಾ ಮಾಲಿನಿಯರನ್ನೋ, ಮಾಧುರಿ ದೀಕ್ಷಿತರುಗಳನ್ನೋ, ಎವೆಯಿಕ್ಕದೇ ನೋಡುತ್ತ, ಅಥವಾ ಆಗೀಗ ಕಣ್ಣು ಮಿಟುಕಿಸುತ್ತ ಸುಖಿಸುತ್ತಿರುತ್ತೀರಿ.

ಎದೆಗಾರ (ಅಥವಾ ಎದೆಗಾರ್ತಿ) ಹುಡುಗ ವಯಸ್ಸಿನವರಾಗಿದ್ದರೆ ನಿಮ್ಮ ಪದ ಕಮಲದಲ್ಲಿ ಬಂದು ಬೀಳುವ ಎಷ್ಟೋ ಎಳೆಯ/ಹಳೆಯ ಹೃದಯಗಳನ್ನು ತುಳಿದು, ಹಿಚುಕಿ, ಕೀಟಲೆ ಮಾಡುತ್ತ ಹೆಮ್ಮೆಯಿಂದ ಬೀಗುತ್ತಿರುತ್ತೀರಿ.

ಇನ್ನು ಓದುಗರು ಮಧ್ಯ ವಯಸ್ಕ ಮಹಿಳೆಯಾಗಿದ್ದರೆ, ಅಕ್ಕ ಪಕ್ಕದ ನಿಮ್ಮ ಸಮಾನ ವಯಸ್ಕ ಮಹಿಳೆಯರ ಜರಿಸೀರೆ, ಡೈಮಾಂಡ್ ನೆಕ್‌ಲೇಸು, ಎಲ್ಲಕ್ಕೂ ಹೆಚ್ಚಾಗಿ ಅವಳ ಸುತ್ತಳತೆ ಇವುಗಳನ್ನೆಲ್ಲ ನೋಡುತ್ತ ಸಂತಸದಿಂದಲೋ, ಮತ್ಸರದಿಂದಲೋ ಕುಲುಕುತ್ತ, ಅಂತಹದರಲ್ಲಿಯೇ ನಿಮ್ಮ ಮೊಂಡ ಮೂಗಿನ ಮಗಳಿಗೊಂದು ಗಂಡು ಸಿಕ್ಕೀತೇ ಎಂದು ಹುಡುಕುತ್ತಿರುತ್ತೀರಿ.

ಒಂದು ವೇಳೆ ಆರೋಗ್ಯ ಕಳೆದುಕೊಂಡ ಸಿನಿಕ ಮುದುಕರಾಗಿದ್ದರೆ ''ಛೇ ಕಾಲ ಕೆಟ್ಟ ಹೋಯಿತು''... ''ನಾಚಿಕೆಗೇಡು'' ... ಇತ್ಯಾದಿ ಮುಕ್ತಾ ಫಲಗಳನ್ನುದುರಿಸುತ್ತ ಒದ್ದಾಡುತ್ತಿರುತ್ತೀರಿ.

ಓದಿನೋಡಿ, ನಿಮ್ಮನ್ನು ನೀವೇ ಕಂಡುಕೊಳ್ಳಿ.

ಆರತಕ್ಷತೆ

– ಅ.ರಾ. ಮಿತ್ರ

ಮದುವೆಯ ಕರೆಯೋಲೆಗಳು ಬಂದಾಗಲೆಲ್ಲಾ ನನ್ನ ಮನಸ್ಸಿನಲ್ಲಿ ತಟಕ್ಕನೆ ಮಿಂಚುವ ಚಿತ್ರವೆಂದರೆ ಸಂಜೆಯ ಆರತಕ್ಷತೆಯ ಕಾರ್ಯಕ್ರಮ. ದೇವರ ಸಮಾರಾಧನೆ, ವರಪೂಜೆ, ಕಾಶೀಯಾತ್ರೆ, ಧಾರೆ ಈ ಶಾಸ್ತ್ರಗಳೆಲ್ಲಾ ನನಗೆ ಅಷ್ಟು ಮುಖ್ಯವಲ್ಲ. ಆದರೆ ಸಂಜೆಯ ಆರತಕ್ಷತೆಯ ಕಾರ್ಯಕ್ರಮಕ್ಕೆ ತಪ್ಪಿಸಿಕೊಳ್ಳುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ಆರತಕ್ಷತೆಗೆಂದು ಹೋದವನು ಬಹಳ ಹೊತ್ತು ಅಲ್ಲೆ ಇದ್ದುಬಿಡುವ ನನ್ನ 'ದೌರ್ಬಲ್ಯ'ಕ್ಕೆ ನಾನಾ ಅರ್ಥಗಳನ್ನು ಕಲ್ಪಿಸಿ, ವ್ಯಾಖ್ಯಾನಿಸಿ, ಗೋಳಾಡಿಸುವ ಗೆಳೆಯರಿದ್ದಾರೆ. ಅಲ್ಲಿ ಬರುವ ಬೆಡಗಿನ ಮುಖಗಳ ಚೆಲುವಿನ ದರ್ಶನಕ್ಕಾಗಿ ನಾನು ಅಲ್ಲಿ ಉಳಿಯುತ್ತೇನೆಂದು ಕೆಲ (ಧೂರ್ತ) ಸ್ನೇಹಿತರು ಆಕ್ಷೇಪಿಸಿದ್ದಾರೆ. ಆರತಕ್ಷತೆ ಮುಗಿದ ಮೇಲೆ ದೊರೆಯುವ ಮದುವೆಯೌತಣದ ಚಪಲ ನನ್ನನ್ನು ಅಲ್ಲೇ ಉಳಿಯುವಂತೆ ಮಾಡಿದೆ ಎಂದು ಇನ್ನು ಕೆಲವರು ಕೆಣಕುತ್ತಾರೆ. ಕೆಲವರ ದೃಷ್ಟಿಯಲ್ಲಿ ಅದು ಹರಟೆಗೆ ಯೋಗ್ಯವಾದ ಸ್ಥಾನ. ಆದ್ದರಿಂದ ಹಳೆಯ ಗೆಳೆಯರ ಭೇಟಿಗೆಂದು ನಾನು ಅಲ್ಲಿ ನಿಂತು ಹುಚ್ಚು ಹರಟೆಯನ್ನು ಕೊಚ್ಚುತ್ತೇನೆಂದು ಒಬ್ಬ ಗೆಳೆಯನ ಹೇಳಿಕೆ. ಈ ಯಾವ ಹೇಳಿಕೆಯನ್ನೂ ಅಲ್ಲಗಳೆದು ಅವರೊಡನೆ ವಾದಕ್ಕೆ ನಿಲ್ಲಲು ನಾನು ಸಿದ್ಧನಿಲ್ಲ. ಅಲ್ಲದೆ ಆ ಗೆಳೆಯರೂ ನನ್ನ ಜೊತೆಗೇ ಆರತಕ್ಷತೆಯ ವೈಭವದ ಉತ್ಸವದ ಪ್ರೇಕ್ಷಕರಾಗಿ ಉಳಿಯುವುದರಿಂದ ಅನುಭವ ಜನ್ಯವಾದ ಅವರ ಹೇಳಿಕೆಗೆ ನನ್ನ ಮೌನದ ಸಮ್ಮತಿಯಿದೆ.

ಮದುವೆ ಗದ್ದಲದಲ್ಲೆಲ್ಲಾ ಮುಖ್ಯವಾದುದೆಂದರೆ ಸಂಜೆಯ ಆರತಕ್ಷತೆಯ ಸಮಯದ ಕಾರ್ಯಕಲಾಪ. ಅದೊಂದು ಮನೋಹರಲೋಕ. ಭ್ರಮಾಲೋಕ ಎಂದರೂ ಸಲ್ಲುತ್ತದೆ. ನಿಮ್ಮ ಕಣ್ಣೆದುರಿಗೇ ಈ ಕನಸು ಮೈದುಂಬಿಕೊಂಡು ನಿಲ್ಲುತ್ತದೆ. ನೀವು ಒಳಗೆ ಹೋಗುವ ಮುನ್ನವೇ ಎಡಭಾಗದಲ್ಲಿ ಸಾಲುಗಟ್ಟಿ ನಿಂತ ಚೆಲುವೆಯರ ತಂಡ ಹೂ ಗಂಧಗಳೊಡನೆ ನಿಮ್ಮ ಸ್ವಾಗತ ಬಯಸಿ ನಿಮಗೆ ಭ್ರಮಾಲೋಕದ ಕೀಲಿಕೈ ಕೊಡುವುದುಂಟು. ಜನರ ಮುಖದರ್ಶನವೇ ಒಂದು ಸೌಭಾಗ್ಯ. ವಸಂತಸ್ಪರ್ಶದಿಂದ ರೋಮಾಂಚಿತವಾದ ಋತುವೈಭವದಂತೆ ಎಲ್ಲರ ಮುಖದ ಮೇಲೂ ಚಿಲುಮೆಯಾಡುವ ನಗೆ. ಅದೂ ಎಂತಹ ನಗೆ! ನೀವಾಗಲೀ, ಆ ಮುಖಗಳ ಒಡೆಯರಾಗಲಿ ಮತ್ತೆ ಉಳಿದ ದಿನಗಳಲ್ಲಿ ಕಾಣಲಾಗದ ನಗೆ. ಜನರನ್ನು ಅವರ ಅತ್ಯುತ್ತಮ ವೇಷದಲ್ಲಿ, ಅತ್ಯುತ್ತಮ ಮುಖಭಂಗಿಯಲ್ಲಿ, ಮುಕ್ತ ಮನಸ್ಸಿನಲ್ಲಿ ಅಲ್ಲಿ ಕಾಣಬಹುದು. ಒಬ್ಬಿಬ್ಬರೆಂದಲ್ಲ, ಎಲ್ಲ ದಿಕ್ಕುಗಳಿಂದ ಹರಿದು ಬರುವ ಒಂದು ರೂಪಪ್ರವಾಹ ಆ ಆವರಣದಲ್ಲೆಲ್ಲಾ ಹರಿದಾಡುತ್ತಿರುತ್ತಿದೆ. ಎದೆ ಕುಲುಕಿಸಿ, ಕಣ್ಣಲ್ಲಿ

ಮಿಂಚು ತುಳುಕಿಸಿ ನಡೆದಾಡುವ ಅಥವಾ ಹರಿದಾಡುವ ಸೌಂದರ್ಯದ ಸುಳಿಗಳು ಮದುವೆಯ ಮನೆಯಲ್ಲಿ ಉನ್ಮಾದದ ಹೊಳೆ ಹರಿಸುತ್ತವೆ. ಆ ರೂಪಪ್ರವಾಹದ ಸುಳಿಗಳನ್ನೂ ಏರಿಳಿತದ ವೈಭವವನ್ನೂ ಬಿಡುಗಣ್ಣರಾಗಿ ದಡದಲ್ಲಿ ನಿಂತು ನೋಡುತ್ತಾ ಪುರುಷವೃಕ್ಷಗಳು ಮೀಸೆಯ ಮೊದಲಲ್ಲೇ ನಗುತ್ತವೆ.

ರಿಸೆಪ್‌ಷನ್ ಅಥವಾ ಆರತಕ್ಷತೆ ಎಂಬುದು ಸ್ವಾತಂತ್ರ್ಯ, ಸ್ವಾಚ್ಛಂದ್ಯಗಳ ಸಂಕೇತವಾಗಿ ಹಾರಾಡುವ ಧ್ವಜ, ಬೆಳಗಿನ ಗಡಿಬಿಡಿ, ಮಂತ್ರಘೋಷ, ದಂಗುಬಡಿಸುವ ಶಾಸ್ತ್ರನಿಷ್ಠೆಗಳ ಉಕ್ಕಿನ ಹಿಡಿತದಿಂದ ಬಿಡುಗಡೆ ಪಡೆದುಕೊಂಡು ಆನಂದಕ್ಕಾಗಿ ಆಚರಿಸುವ ಉತ್ಸವ. ಬೆಳಗಿನ ಕಚ್ಚೆ, ವಲ್ಲಿ, ಜರಿಯ ಪೇಟ, ಹೋಮಕುಂಡದ ಹೊಗೆ, ಬೆಂಕಿಯ ಧಗೆ, ಮಂತ್ರದ ದಭೆದಭೆ, ಅಂತಃಪಟದ ಕಾಟ, ಯಾವುದೂ ಇಲ್ಲಿ ನಡೆಯದು. ಉಸಿರು ಕಟ್ಟಿಸುವ ಕಾರ್ಯಕ್ರಮಗಳ ಹೊರೆ, ತಲೆಸುತ್ತು ಬರಿಸುವ ಗುಜುಗುಜು ಸಂತೆಗಳ ಪಾಡು ಈಗಿಲ್ಲ. ಇದೊಂದು Transfer Scenery (ಬದಲು ತೆರೆ) ಇಲ್ಲಿ ಎಲ್ಲರಿಗೂ ಶಾಸ್ತ್ರದ ಸಂಕಲೆಯಿಂದ ಬಿಡುಗಡೆ. ಬರುವವರು ತಮ್ಮ ಇಷ್ಟಬಂದ ಹಾಗೆ ಓಡಾಡುತ್ತಾರೆ. ಇರುವವರು ಪ್ರಸನ್ನತೆಯ ಮುಖವಾಡ ಧರಿಸುತ್ತಾರೆ. ಇಲ್ಲಿ ಬೇಕಾದ ಪರಿಕರಗಳೂ ಅಷ್ಟೆ. ಪನ್ನೀರು, ಪುಷ್ಪಗುಚ್ಛಿಕೆಗಳು, ಪರಿಮಳದ್ರವ್ಯ, ವಧೂವರರು ಕೂರುವ ಆಸನಗಳ ವೈಭವಯುತ ಅಲಂಕರಣ, ವರ್ಣರಂಜಿತ ತೂಗು ದೀಪ ವ್ಯವಸ್ಥೆ, ಕಮಾನುಗಳು, ತೋರಣಗಳು, ಕಾಗದ - ಎಲೆಗಳ ವೈವಿಧ್ಯಪೂರ್ಣ ತೂಗು ಅಲಂಕರಣಗಳು. ಇಷ್ಟರ ಮೇಲೆ ಆಗಾಗ ತಂಪಾಗಿ ಹದವಾಗಿ ಕಿವಿಗೆ ತಾಗುವ ಸಂಗೀತದ ಮಧುರ ಧ್ವನಿತರಂಗ ಮಾಲಿಕೆ. ಅಲ್ಲಿಯ ಒಪ್ಪ ಓರಣ, ಅಚ್ಚುಕಟ್ಟು, ಸಂಭ್ರಮಗಳನ್ನು ನೋಡಿದರೆ ಬಹುಶಃ ಆರತಕ್ಷತೆಯ ಭವನವೇ-

''ಎದೆಗೆ ಬರುತಿದೆ ಜಗದ ಮುದ
ಕುಣಿದಲ್ಲದೆ ನಾ ತಾಳೆನಿದ
ಕೂಡಿ ಆಡಿ ಕುಣಿದಾಡಿದಲ್ಲದೆ
ತಾಳಬಲ್ಲೆನೇ ಇಂಥ ಮುದ''

ಎಂದುಕೊಂಡು ಉನ್ಮಾದಾವಸ್ಥೆಯಲ್ಲಿ ನೃತ್ಯಪ್ರದರ್ಶನಕ್ಕೆ ತೊಡಗಿದೆಯೋ ಎನಿಸುತ್ತದೆ.

ಕನಸು ಮನಸುಗಳನ್ನು ಕೂಡಿಸಿ ಬೆಳೆಸುವ 'ಹರೆಯದ ಹಬ್ಬ'ದ ಮಹಾಸಂಭ್ರಮದಲ್ಲಿ ಹೆಂಗಸರ ಓಡಾಡ, ಓಲಾಟಗಳು ಎಷ್ಟೊಂದು ಅರ್ಥಪೂರ್ಣ! ಅಲ್ಲಿ ನೋಡಿ. ಒಬ್ಬಳು ನವಾಂಗಿ ಅತ್ತಿಂದಿತ್ತ, ಇತ್ತಿಂದತ್ತ ಓಡಾಡುತ್ತಿದ್ದಾಳೆ. ಅವಳು ಉಟ್ಟಿರುವ ಸೀರೆ ಹೊಸದು. ಮುಖದಲ್ಲಿ ತಂದುಕೊಂಡಿರುವ ಕಳೆ ಹೊಚ್ಚಹೊಸದು. ಚೈತನ್ಯವೇ ಉಕ್ಕಿ ಸೂಸುತ್ತಿದೆ

ಎಂಬಂತೆ ನಡಿಗೆ. ನಡಿಗೆಯಲ್ಲ ಅದು, ನರ್ತನ ಪಟುವಿನ ಅಂಗವಿನ್ಯಾಸ ಪೂರ್ಣವಾದ ಪದವಿಭ್ರಮ. ಅವಳ ಮುಖದಲ್ಲಿ ಕುಣಿಸಿ ಕೂಗಿಡಿಸುತ್ತಿರುವ ನಾನಾ ಭಾವಗಳಲ್ಲಿ ಯಾವುದನ್ನೆಂದು ಆರಿಸಿಕೊಳ್ಳುವುದು, ಯಾವುದನ್ನು ಕೈಬಿಡುವುದು? ಅವಳ ಕಷ್ಟ ಇದು. ಹೆಚ್ಚು ಕೆಲಸ ಮಾಡಿ ಬಟ್ಟೆ ಕೊಳಕಾಗುವುದು ಇಷ್ಟವಿಲ್ಲ. ಆದರೆ ಜನಗಳೆದುರಿಗೆ ತುಂಬ ಜವಾಬ್ದಾರಿಯ ಕೆಲಸ ಹೊತ್ತವಳಂತೆ ನಟಿಸಬೇಕು. ಆಗಾಗ ಆಪ್ತೇಷ್ಟರನ್ನು ಕಂಡು ಮಾತನಾಡಿಸಬೇಕು. ಮೆಲುದನಿಯಲ್ಲಿ ತನ್ನಷ್ಟಕ್ಕೇ ಹಾಡಿಕೊಳ್ಳಬೇಕು. ಹಲವಾರು ದೃಷ್ಟಿರೇಖೆಗಳು ತನ್ನ ರೂಪವೃತ್ತವನ್ನು ಛೇದಿಸುತ್ವೆ ಎಂಬುದು ತನಗೆ ತಿಳಿದಿದೆ. ಅದು ತನಗೆ ಬಹಳ ಪ್ರಹ್ಲಾದಕಾರಿಯೂ ಹೌದು; ಆದರೆ ನನ್ನ ಚೆಲುವಿನ ದರ್ಬಾರಿಗೆ ಗೌರವಪೂರ್ವಕವಾಗಿ ದೊರೆತಿರುವ ಈ ದೃಷ್ಟಿ ಕಾಣಿಕೆಯನ್ನು ಸ್ವೀಕರಿಸುವುದು ಹೇಗೆ? ದೊಡ್ಡವರೇನೆಂದುಕೊಂಡಾರು? ಎಂಬ ತಳಮಳ. ಇಂಥ ಆದರ್ಶ - ಅಂತರಾಳಗಳ ನಡುವೆ ಅನಿಶ್ಚಿತಮತಿಯಾಗಿ ತೇಲಾಡುವ ಹೆಣ್ಣುಗಳ ಅವಾಂತರವನ್ನಷ್ಟು ನೋಡಬೇಕು.

ಹೆಣ್ಣಿನ ಗತಿ ಹಾಗಾದರೆ, ರೂಪದ ಆಸವದಿಂದ ಕಣ್ಣಿಗೆ ಮತ್ತು ಬಂದಿರುವ ಆ ಆವರಣದಲ್ಲಿ ಯುವಕನಿಗೆ ಮೈಮರೆಯಲು ಎಷ್ಟು ಹೊತ್ತು ಬೇಕು? ಹೆಣ್ಣಿನ ನಡೆ, ನಿಲುವು, ನೋಟ ಇವುಗಳ ದರ್ಶನಕ್ಕಾಗಿ ಅವನ ಚೇತನ ಯುಗ-ಯುಗಗಳಿಂದ ತಪಸ್ಸು ಮಾಡುತ್ತಿದೆಯೋ ಎಂಬಂತೆ ಚಡಪಡಿಸುತ್ತಿರುತ್ತೆ. ವಧೂವರರ ಕಡೆ ಆಗಾಗ ಹೊರಳುದೃಷ್ಟಿ, ಗೀತಮಾಧುರ್ಯಕ್ಕೆ ಆಗಾಗ ಕಿವಿದಾನ, ಸಡಗರದಿಂದ ಓಡಾಡುವವರ ಕಡೆ ಆಗಾಗ ಎಸೆಯುವ ಮಿಂಚುನೋಟ, ಅಲ್ಲಲ್ಲಿ ಕಾಣಿಸುವ ಪರಿಚಿತ ಮುಖಗಳಿಗೆ ಇದ್ದಲ್ಲಿಂದಲೇ ಕೈ ಎತ್ತಿ ಕಳುಹಿಸುವ ನಗೆ ಸಂದೇಶ - ಈ ಶತಾವಧಾನದ ಗಡಿಬಿಡಿಯಲ್ಲಿ ಗಡಿಯಾರ ಬೇಗ ಬೇಗ ಸಾಗುತ್ತಿದೆಯಲ್ಲ ಎಂಬ ಕೊರಗು ಹಚ್ಚಿಕೊಂಡು ಧಾವಂತ ಪಡುವವರ ಸಂಖ್ಯೆ ಅಪಾರ. ಗಂಧರ್ವ ರಾಜಕುಮಾರಿಯಾದ ಕಾದಂಬರಿಯ ಅಂತಃಪುರಕ್ಕೆ ಮಹಾಶ್ವೇತೆಯೊಡನೆ ಬಂದ ಚಂದ್ರಾಪೀಡನಿಗೆ ಅಲ್ಲಿಯ ಸ್ತ್ರೀ ಸಮುದಾಯವನ್ನು ಕಂಡು ವಿಸ್ಮಯವಾಯಿತಂತೆ. ಒಂದು ಅದ್ಭುತ ರೂಪಪ್ರವಾಹವೇ ತನ್ನ ಸುತ್ತ ಹರಿಯುತ್ತಿರುವಂತೆ, ತಾನು ಆ ರೂಪಪ್ರವಾಹದ ಇದಿರಿಗೆ ಈಜಿ ಆಚೆಯ ದಡವನ್ನು ಸೇರಲು ಹೆಣಗುತ್ತಿರುವಂತೆ ಅವನಿಗೆ ಭಾಸವಾಯಿತೆಂದು ನಾಗವರ್ಮ ಹೇಳುತ್ತಾನೆ. ಆರತಕ್ಷತೆಯ ಭವನದಲ್ಲಿ ಪುರುಷರ ಅವಸ್ಥೆಯೂ ಇಷ್ಟೆ. ನಾನಾ ಯೋಚನೆಗಳಿಂದ ಮನಸ್ಸು ಗೊಂದಲಮಯವಾಗುತ್ತದೆ. ಈ ಸೌಂದರ್ಯದ, ಬೆಡಗಿನ ಗುಟ್ಟು ಯಾವುದು? ಆ ನಗೆಯ ತಲಕಾವೇರಿ ಎಲ್ಲಿ? ಆ ಚೈತನ್ಯದ ಮೂಲ ಎಲ್ಲಿಯದು?

'ಎಲ್ಲಿಂದೊ ಬಂದೊಂದು ಸೌಂದರ್ಯ ಝುರಿಯಿಂದ
ಎದೆ ಎದೆಗು ಕಾರಂಜಿ ಪುಟಿಯುತಿದೆ''

ಎಂಬ ಕವಿವಾಣಿಯಂತೆ ವಿಸ್ಮಯಭಾವದಲ್ಲೇ ನಮ್ಮ ಪರಿಭಾವನೆಗೆ ನಿಲುಗಡೆಯೆ?

ಗಂಡಸರಿಗೆ ಮಾತ್ರ ಹೆಣ್ಣುಗಳ ಮೇಲೆ ಆಸಕ್ತಿ ಎಂದರೆ ತಪ್ಪಾದೀತೇನೋ! ಹೆಂಗಸರೇ ಹೆಂಗಸರನ್ನು ಆಪಾದಮಸ್ತಕವಾಗಿ ಪರೀಕ್ಷಿಸುತ್ತಾರೆ. ಹೊಸ ಬಗೆಯ ಚಪ್ಪಲಿಯೋ, ಜಂಬದ ಚೀಲವೋ, ಹೊಸ ಮಾದರಿಯ ಚಿನ್ನದ ಬಳೆಯೋ, ಬಳೆಯಂತೆ ಕಾಣುವ ಕೈಗಡಿಯಾರವೋ, ತುರುಬುಕಟ್ಟಿರುವ ವೈಖರಿಯೋ, ಹೇರ್‌ಪಿನ್ ಸಿಂಧೂರ ಕಾಡಿಗೆಗಳೋ, ಹಚ್ಚಿದ ಪರಿಮಳವೋ, ನಡಿಗೆಯ ಸಡಗರವೊ- ಅಂತೂ ಒಂದಲ್ಲ ಒಂದು ನೋಡುವವರ ಮನಸ್ಸಿನಲ್ಲಿ ಮೆಚ್ಚುಗೆ, ಅಸೂಯೆ, ಬಯಕೆ, ಆಸಕ್ತಿ ಇತ್ಯಾದಿ ಸಂಚಾರೀ ಭಾವಗಳನ್ನು ಕೆರಳಿಸುವುದುಂಟು. ಚಿನ್ನದ ಒಡವೆ ಅಂದರಂತೂ ಹೆಣ್ಣಿನ 'ಎರಡನೇ ಜೀವ' ತಾನೇ! ಕರ್ಣಾಭರಣ, ಉಂಗುರ, ಜಡೆಬಿಲ್ಲೆ, ಕೊರಳ ನಾನಾ ನಮೂನೆಯ ಸರಗಳು ಮೆರವಣಿಗೆ ಹೊರಟಾಗ ಆ ದಿನ ಅವಿಲ್ಲದ ಹೆಣ್ಣುಗಳಿಗೆ ಕಣ್ಣು ಕುಕ್ಕುವಂತೆ ಮಾಡಬಲ್ಲುವು.


ಎಲ್ಲೋ ಕೆಲವರು, ಅಸೂಯಾಪರರು, ಆರತಕ್ಷತೆಯ ಭವನದಲ್ಲಿ ತಮ್ಮ ಕಡೆಯವರ ಸಡಗರದ ಓಡಾಟದ ದೃಶ್ಯಗಳನ್ನು ಸಹಿಸಲಾಗದೆ ಕಣ್ಣಲ್ಲಿ ರಕ್ತ ತುಂಬಿಕೊಳ್ಳುವುದುಂಟು. ಸಾಶಂಕ ದೃಷ್ಟಿಯಿಂದ ನೋಡತಕ್ಕವರಿಗೆ ಈ ಸಂದರ್ಭದಲ್ಲಿ ತಮ್ಮ ಹೆಂಡತಿ, ತಂಗಿಯರ ಚರ್ಯೆ ಓಡಾಟ ನಗೆಗಳಿಗೆ ವಿಶೇಷ ಅರ್ಥವೇ ಹೊಳೆದು ಗುರುಗುಟ್ಟುವಂತಾದೀತು. ಆದರೆ ಮನೆಯವರು ಈ ಸ್ವಭಾವವನ್ನು ತಿಳಿದವರಾದುದರಿಂದ ಇವರ ಕೆಂಗಣ್ಣಿನ ಧ್ವನಿಗೆ ಸೊಪ್ಪು ಹಾಕದೆ ಹೆಚ್ಚಿನ ಲವಲವಿಕೆಯಿಂದ ಓಡಾಡಿ ಸ್ವಾತಂತ್ರ್ಯವನ್ನನುಭವಿಸುವುದುಂಟು.

ಆರತಕ್ಷತೆ ಎಲ್ಲರಿಗೂ ದಯಪಾಲಿಸುವ ಈ ಸ್ವಾತಂತ್ರ್ಯದ ಕೆಚ್ಚನ್ನು ನಾನು ತುಂಬಾ ಮೆಚ್ಚುತ್ತೇನೆ. ಬಹುಶಃ ಈ ಗುಣ ಅದರ ರಕ್ತಕ್ಕೇ ಅಂಟಿದ್ದು ಎಂದು ಕಾಣುತ್ತದೆ. ಉದಾಹರಣೆಗೆ 'ಆರತಕ್ಷತೆ' ಎಂಬ ಶಬ್ದವನ್ನೇ ತೆಗೆದುಕೊಳ್ಳಿ. ಆರತಕ್ಷತೆ ಎಂದು ಬರೆಯುವುದು ತಪ್ಪು ಎಂದು ವ್ಯಾಕರಣ ಹೇಳುತ್ತದೆ. ಶಬ್ದ ನಿಷ್ಠರಾದ ವೈಯಾಕರಣರು ಆರತಿ-ಅಕ್ಷತೆ ಎಂದು ಎರಡು ಶಬ್ದಗಳನ್ನೂ ಬೇರೆ ಬೇರೆ ಇರಿಸಿ ಮಧ್ಯೆ ಒಂದು ರೇಖೆ ಹಾಕಿ, ಗಡಿ ದಾಟಬಾರದೆಂದು ಹಟ ಹಿಡಿಯುತ್ತಾರೆ. ಇವೆರಡೂ ಬೇರೆ ಜಾತಿಯ ಶಬ್ದಗಳಂತೆ. ಇವುಗಳ ಮದುವೆಯನ್ನು ವ್ಯಾಕರಣ ಒಪ್ಪುವುದಿಲ್ಲ. 'ಆರತ್ಯಕ್ಷತೆ' ಎಂದು ಬರೆಯಬೇಕಂತೆ. ಒಬ್ಬ ವಿದ್ವಾಂಸರು, ಶಬ್ದಶಾಸ್ತ್ರದ ವಿರುದ್ಧ ಬಂಡಾಯವೆದ್ದ ಈ ಶಬ್ದದ ಸ್ವಾತಂತ್ರ್ಯ ಘೋಷಣೆಯನ್ನು ಮೆಚ್ಚಲಾರದೆ ತಮ್ಮ ಮಗಳು ಮದುವೆಯ ಕರೆಯೋಲೆಯಲ್ಲಿ ಆರತಕ್ಷತೆ ಎಂದು ಬರೆಯಲು 'ಫಲತಾಂಬೂಲ' ಎಂಬ ಶಬ್ದ ಬಳಸಿದ್ದುಂಟು. ಆದರೂ ಈ ಶಬ್ದ ವ್ಯಾಕರಣವನ್ನು ಧಿಕ್ಕರಿಸಿ ಆರತಕ್ಷತೆ ಎಂದೇ ಕರೆಸಿಕೊಂಡು ಜನಪ್ರಿಯಾಗಿದೆ. ತನ್ನಂತೆಯೇ ಎಲ್ಲರಲ್ಲೂ ಸ್ವತಂತ್ರ್ಯ

ಮನೋಧರ್ಮವನ್ನು ಅರಳಿಸಿ ನಮ್ಮನ್ನು ಒಂದು ಸಂಭ್ರಮದ ಲೋಕಕ್ಕೆ ಎಳೆದೊಯ್ಯುತ್ತದೆ. ನಗೆ, ಕೇಕೆ, ಉಲ್ಲಾಸಗಳ ಭಾವತರಂಗಗಳನ್ನು ಮದುವೆಯ ಚಪ್ಪರದ ತುಂಬ ಹರಡುತ್ತದೆ.

ಎಲ್ಲ ಶುದ್ಧ ಆನಂದ ಎಂದೆನೆ? ಯಾವುದೋ ಒಂದು ಮೂಲೆಯಲ್ಲಿ ಹೆಣ್ಣಿನ ತಂದೆ ಈ ದೃಶ್ಯವನ್ನು ಆಗಾಗ ಮೌನವಾಗಿ ವೀಕ್ಷಿಸುತ್ತಾ ಗೋಡೆಗೊರಗಿ ನಿಲ್ಲುವುದುಂಟು. ಭ್ರಮೆ-ಪ್ರಮೆಗಳ ನೆರಳು ಬೆಳಕುಗಳನ್ನು ದೃಷ್ಟಿಸುತ್ತಾ, ಜೇಬಿನೊಳಗಿರುವ ದುಬಾರಿ ಬಡ್ಡಿಯ ಸಾಲಪತ್ರವನ್ನು ಯಾರಿಗೂ ಕಾಣದಂತೆ ತಡವಿಕೊಳ್ಳುತ್ತಾ ಮುಖದ ಬೆವರೊರಸಿಕೊಂಡು, ಬಿಡುಗಡೆಯ ನಿಃಶ್ವಾಸದಿಂದ, ಬಂದವರನ್ನು ನಗೆಯಿಂದ ಸ್ವಾಗತಿಸುತ್ತಾ ನಿಲ್ಲುವ ಭಂಗಿಯೂ ಸ್ವಾಗತಾರ್ಹವಾದದ್ದೇ.

★★★



"ಕಪಿಗಳಿಂದ ಸೇತುವೆ ಕಟ್ಟಿಸಿದ್ದನ್ನ ಆಬ್ಜೆಕ್ಟ್ ಮಾಡುಕ್ಕೆ
ಮನೇಕಾ ಗಾಂಧಿ ಆಗ ಇರ್ಲಿಲ್ಲ ಮಗೂ"

ಶ್ರದ್ಧಾಂಜಲಿ

- ಶ್ಯಾಮಲ ರವಿಶಂಕರ್

ಅದೊಂದು ಕಾಲವಿತ್ತು, ನಮ್ಮ ಸಂಸ್ಥೆಯುಲ್ಲಿ ಕೆಲಸ ಮಾಡುತ್ತಿದ್ದವರೋ ಅಥವಾ ನಿವೃತ್ತಿ ಹಿಂದಿದವರೋ ಪರಂದಾಮವನ್ನೈದಿದರೆ, ಸಮಾಚಾರ ಗೊತ್ತಾದ ಕೂಡಲೆ ರಜ ಘೋಷಿಸುತ್ತಿದ್ದರು. ಶವಸಂಸ್ಕಾರವಾದ ಮೇಲೆ ಸಂತಾಪ ಸೂಚಕ ಸಭೆಯೊಂದನ್ನು ಏರ್ಪಡಿಸಿ ಸ್ನೇಹಿತರೂ ವೈರಿಗಳೂ ಮೃತಾತ್ಮರನ್ನು ಹೊಗಳಿ ಹೊಗಳಿ ಅಟ್ಟಕ್ಕಲ್ಲಾ, ಸ್ವರ್ಗಕ್ಕೆ ಏರಿಸಿ, ಕಳಿಸಿ, ಅವರ ಮನೆಯವರಿಗೆ ನಾವು ಅತ್ತೆವೆಂದು ತಿಳಿಸಿ ಪತ್ರವನ್ನು ಕಳುಹಿಸುವುದು. ತದನಂತರ ಮತ್ತೆ ರಜ! ಹೀಗಾಗಿ ಸತ್ತವರ ದಯೆಯಿಂದ ಕನಿಷ್ಟ ಪಕ್ಷ ಎರಡು ಅರ್ಧ ದಿನಗಳಷ್ಟಾದರೂ ರಜ ಸಿಗುತ್ತಿತ್ತು. ನಮ್ಮ ಸಂಸ್ಥೆಯ ವಯಸ್ಸು 120 ವರ್ಷ! ಈಗ ನಮ್ಮ ರಜೆಗಳು ಎಷ್ಟು ಬೇಗ ಬರಬಹುದೆಂದು ನೀವೇ ಊಹಿಸಿ! ಒಂದಷ್ಟು ದಿನ ನೆಟ್ಟಗೆ ಕಾಲೇಜಿಗೆ ಬಂದು ಬೇಸತ್ತ ಹುಡುಗರು ಆಗಾಗ ಮಾತಾಡಿಕೊಂಡು, ''ಏನ್ರೋ, ಜನರಿಗೆ nortality rate ಕಡಿಮೆ ಆಗ್ತಿದೆ ಅನ್ಸೋಲ್ವೇನ್ರೋ? ಯಾವ ಹಣ್ಣು - ಹಣ್ಣು ಮುದುಕಾನೂ ಸಾಯದೆ ನಮಗೆ ಈಚೆಗೆ ರಜಕೂಡ (!) ಸಿಗ್ತಿಲ್ವಲ್ರೊ?'' ಅನ್ನೋದು ಸರ್ವೇ ಸಾಧಾರಣವಾಗಿ ಹೋಗಿತ್ತು!

ಈಗ ಇವೆಲ್ಲಾ ನಡೆಯೋದಿಲ್ಲ, ಬಿಡಿ. ಉಪ ರಾಷ್ಟ್ರಪತಿ ಕೃಷ್ಣಕಾಂತರು ನಿಧನರಾದಾಗ ರಜ ಘೋಷಿಸಿದ್ದು ಮಧ್ಯಾಹ್ನ ಮೂರು ಘಂಟೆಗೆ! ಅದೂ ಶನಿವಾರ, ಕಾಲೇಜಿಗೆ ಕಾಲೇಜೇ ಖಾಲಿಯಾಗಿತ್ತು, ಅಲ್ಲೊಂದು ಇಲ್ಲೊಂದು ಪ್ರಾಕ್ಟಿಕಲ್ ಬ್ಯಾಚ್‌ಗಳನ್ನು ಬಿಟ್ಟರೆ! ಬೆಳಿಗ್ಗೆ 9.15ಕ್ಕೇ ಸಮಾಚಾರ ತಿಳಿದ್ದಿದ್ರೂ, ಈಚಿನ ಪದ್ಧತಿಯ ಮೇರೆಗೆ ರಜೆಗೆ ಸೊನ್ನೆ ಬೀಳಬಹುದೆಂದೇ ಕೆಲಸಕ್ಕೆ ಹೊರಟು ಹಾಜರಾದೆ ನಾನು.

ನನ್ನ ಮನಃ ಪಟಲದ ಮೇಲೆ ನಾನು ಹಾಜರಾದ ಹಲವಾರು ಶ್ರದ್ಧಾಂಜಲಿ ಸಭೆಗಳು ಹಾದು ಹೋದವು ಅವುಗಳಲ್ಲಿ ಹಲವು ದುಃಖ ತರಿಸುವಂಥಾವು. ಕೆಲವು ನಗೆ ತರಿಸಿದ್ದವೂ ಕೂಡ (ಕ್ಷಮಿಸಿ ಇದರಿಂದ ಯಾರಿಗೂ ಅವಮಾನ ಅವಹೇಳನ ಮಾಡಬೇಕೆಂಬ ಉದ್ದೇಶವಿಲ್ಲ. ನಗೆ ಹಂಚಿಕೊಳ್ಳುವುದೊಂದೇ ಉದ್ದೇಶ)

ನಾನು ರಿಸರ್ಚ್ ಸ್ಕಾಲರ್ ಆಗಿದ್ದ ಕಾಲ ಯಾರೋ ಹೆಸರಾಂತ ವಿಜ್ಞಾನಿಯೊಬ್ಬರು (Obivously) ಹೆಸರು ಪಡೆಯುವುದಕ್ಕೆ ಮುಂಚೆ ಕೆಲವೇ ದಿನಗಳ ಮಟ್ಟಿಗೆ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರಂತೆ - 98 ವರ್ಷದ ಪ್ರಾಯದಲ್ಲಿ 74 ವರ್ಷದ ತಮ್ಮ ಮಗನ ಮನೆಯಲ್ಲಿ ಶಿಕಾಗೋ ಮಹಾನಗರದಲ್ಲಿ ನಿಧನರಾದ ಎಷ್ಟೋ ದಿನ ನಂತರ ನಮಗೆ ಸುದ್ದಿ ಮುಟ್ಟಿತು. ಅವರ ಕೈ ಕೆಳಗೆ ಕೆಲಸ ಮಾಡಿದ್ದವರಲ್ಲಿ ಯಾರೊಬ್ಬರೂ ಬದುಕಿರಲಿಲ್ಲ, ಬದುಕಿದ್ದವರು ನಮ್ಮ ಮಧ್ಯೆಯಂತೂ ಇರಲಿಲ್ಲ. ಹಾಗೂ ಹೀಗೂ ಸಭೆಯಲ್ಲಿ ಅಂತೆ-ಕಂತೆ ಭಾಷಣಗಳ ಮಳೆ ಸುರಿಯಿತು. ಅವರನ್ನು (ಕಾಣದಿದ್ದರೂ)

ಹೊಗಳಿ ಕಡೆಗೆ 2 ನಿಮಿಷಗಳ ಮೌನ ಘೋಷಿಸಲ್ಪಟ್ಟಿತು. ಎಲ್ಲರೂ ಮ್ಲಾನವದನರಾಗಿ ಕೈಕಟ್ಟಿ ಬಾಯ್ಮುಚ್ಚಿ (2 ನಿಮಿಷ ಯಾವಾಗ ಮುಗಿಯುತ್ತೋ ಎಂಬಂತೆ) ಇದ್ದರೂ ಪರಿಸ್ಥಿತಿ ತೀರಾ ಗಂಭೀರವಾಗಿತ್ತು. 30 ಸೆಕೆಂಡುಗಳು ದಾಟಿರಬಹುದು. ಒಬ್ಬಾಕೆ ಚೀಟಾರನೆ ಕಿರುಚಿ ಯದ್ವಾತದ್ವಾ ಓಡಿದರು! ಹಿಂದೆ ಮುಂದೆ ಎನ್ನದೆ 'ಯಾರು, ಏನು' ಅಂದ್ಕೊಂಡೇ ಇನ್ನೆಲ್ಲರೂ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿ ಓಡಲಾರಂಭಿಸಿದರು! ಅಂತೂ ಆಕೆ "ಹಾವು, ಹಾವು ಎಲ್ಲರೂ ಓಡಿ" ಎಂದು ಕಮಾಂಡ್ ಕೊಟ್ಟು ಅದೃಶ್ಯರಾದರು! 'ಹಾವು' ಅಂದಾಕ್ಷಣ ಎಲ್ಲರೂ Marathonನ್ನ ತರಬೇತಿ ಶಿಬಿರವೋ ಎಂಬಂತೆ ಓಡಿ ಹೋದರು ಸಭೆ ಅಲ್ಲಿಗೆ ಮುಕ್ತಾಯವೆಂದು ಹೇಳಬೇಕೆ?

ಹಾಗೆ ಹೊರಟವರು ಮನೆಗೆ ತೆರಳಿದೆವೆಂಬುದೂ ಹೇಳಬೇಕಾಗಿಲ್ಲ! ಇಷ್ಟಕ್ಕೂ ಕಾರಣ ಒಂದು ಜರಿ! ಇದು ಆಕೆಯ ಕಾಲನ್ನು ಸವರಿದ್ದುದು! ಹಳೇ ಕಟ್ಟಡ, ಗ್ಯಾಲರಿ ಬೇರೆ! ಅಲ್ಲೊಂದು ಹುತ್ತವಿದೆ ಎಂದು ಪ್ರತೀತಿ ಇತ್ತು ಆದರಿಂದ ಗುಡಿಸುವವರೂ ಅಲ್ಲಿ ಸುಳಿಯುವುದಿಲ್ಲ. ಜರಿ ಶ್ರದ್ಧಾಂಜಲಿ ಅರ್ಪಿಸದೆ ಸ್ವೇಚ್ಛೆಯಾಗಿ ಓಡಾಡುತ್ತಾ ಇಂಥಾ ಪ್ರಮಾದವನ್ನೆರಗಿತ್ತು!

ಇದಾದ ಹಲವಾರು ವರ್ಷಗಳು ಕಳೆದಿರಬಹುದು. ಮಾಜಿ ಪ್ರಿನ್ಸಿಪಾಲರೊಬ್ಬರಿಗಾಗಿ ಏರ್ಪಡಿಸಿದ್ದ ಸಂತಾಪ ಸೂಚಕ ಸಭೆ. ನಿಧನರಾದ ಪ್ರಿನ್ಸಿಪಾಲರು ನನಗೆ ಬಹಳ ಪರಿಚಿತರಾದದ್ದರಿಂದ ಎಲ್ಲರ ಒತ್ತಾಯದ ಮೇರೆಗೆ ನಾನು ಭಾಷಣ ಮಾಡಬೇಕಾಯಿತು. ಕಟ್ಟಡ ಹೊಸತು, wiring ನಲ್ಲಿ ಬಹಳ loose contact ಇದ್ದ ಕಾರಣ ನಾನು ಮಾತನಾಡಲಾರಂಭಿಸಿದಾಗ ಮೈಕ್ ತಣ್ಣಗಾಯಿತು. ಗಟ್ಟಿಯಾಗಿ ಮಾತನಾಡಬೇಕೆಂದು ಎಲ್ಲರೂ ವಿನಂತಿಸಿದರು. ನನ್ನ ಧ್ವನಿ ತಾರಕಕ್ಕೇರಿತ್ತು. ಒಮ್ಮೆಲೇ ಮೈಕಾಸುರ ಎಚ್ಚೆತ್ತ! ಪರಿಣಾಮ. ಎಲ್ಲರೂ ಕಿವಿಮುಚ್ಚಿಕೊಳ್ಳಬೇಕಾಯಿತು! ನನ್ನ ಮುಖ ಮೂರು ಕಾಸಿನಗಲ! ಸಾಲದ್ದಕ್ಕೆ ಮೌನ ವಾಚರಿಸುತ್ತಿದ್ದಾಗ ಒಂದರ ಹಿಂದೆ ಒಂದಂತೆ ಸೀನಲಾರಂಭಿಸಿದೆ ಇದುವರೆಗೂ ಹಾಗೆ ಅಷ್ಟೊಂದು chains of sneezes ನನಗೆ ಬಂದೇ ಇಲ್ಲ, ಅಂದು ಬಿಟ್ಟರೆ. ಅಂತೂ ಆವತ್ತು ನಾನು ತಲೆ ಎತ್ತಲಾಗಲಿಲ್ಲ. ಇಂದಿಗೂ ನನ್ನ ಸಹೋದ್ಯೋಗಿಗಳು ಯಾರದ್ದಾದರೂ condotence meeting ಗಾಗಿ ಹೋಗುತ್ತಿದ್ದಾಗ; ಅಮ್ಮಾ ತಾಯಿ, ನೀನು ಈಗಲೇ ಎಷ್ಟು ಬೇಕೋ ಅಷ್ಟು ಸೀನಿಬಿಡು. ಆಮೇಲೆ ನಮ್ಮನ್ನು ನಗುವಂತೆ ಮಾಡಬೇಡ. after all condolence meeting is a serious one ಅಂತ ಚುಡಾಯಿಸ್ತಾರೆ!

ಹೋದ ವರ್ಷ ನಮ್ಮ ಲ್ಯಾಬ್ ಬಾಯ್ ರಸ್ತೆಯ ಅಪಘಾತದಲ್ಲಿ ತೀರಿಕೊಂಡ. ಎಲ್ಲರಿಗೂ ಬಹಳ ವ್ಯಸನ: "ಪಾಪದ ಹುಡುಗ, ಬಡತನದಿಂದ ಹೊರಬರಲು ಪ್ರಯತ್ನಿಸುತ್ತಿದ್ದವನಿಗೆ ಹೀಗಾಗಬಾರದಾಗಿತ್ತು ಎಂಬ ಮಾತುಗಳು ಎಲ್ಲೆಲ್ಲೂ ಕೇಳಿ ಬರುತ್ತಿತ್ತು. ಸಭೆ ಆಚರಣೆಯಲ್ಲಿತ್ತು, ಮೌನ ಆಚರಣೆಯ ಅರ್ಧದಲ್ಲಿ ಆಫೀಸ್ ಅಟೆಂಡರ್ ಕಿವುಡ ಬೋರಣ್ಣ" ಢಣ್, ಢಣ್, ಢನ್" ಎಂದು ಘಂಟೆ ಬಾರಿಸಿದ್ದ!

ಅವನಿಗೆ ಈ ಸಂತಾಪ ಸೂಚಕದ ಸುಳಿವೂ ಹತ್ತಿರಲಿಲ್ಲ ತನ್ನ ಪಾಡಿಗೆ ತನ್ನ ಕೆಲಸ ಮಾಡಿದ್ದ, 3 ಘಂಟೆಗೆ ಬೆಲ್ ಬಾರಿಸಬೇಕು, ಬಾರಿಸಿದ್ದ! ಎಲ್ಲರೂ ಬೆಚ್ಚಿ ಬಿದ್ದಿದ್ದು ಆಶ್ಚರ್ಯವೇನು?

ಕಳೆದ ವಾರ ನಿಧನರಾದ ಮಾಜಿ ಪ್ರಾಧ್ಯಾಪಕರಿಗಾಗಿ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡುತ್ತಿದ್ದ ಪ್ರಿನ್ಸಿಪಾಲರ ಸೆಲ್ ಫೋನ್ ಮೂರು ಸರ್ತಿ ಕಿರ್ಲಿತು! ನನ್ನ ಪಕ್ಕದಲ್ಲಿದ್ದ ಪ್ರಾಣಿಶಾಸ್ತ್ರದ ವಿಭಾಗದ ಮುಖ್ಯಸ್ಥ ''ಏನು ಜನಾನಪ್ಪ, cell ನ switch off ಮಾಡ್ಬಾರ್ದಾ, ಸನ್ನಿವೇಶ ಎಂಥಾದ್ದೂ, ಏನೂ ಎಂಬುದೂ ಗ್ರಹಿಸೂಲ್ಲವಲ್ಲಾ, ಇಂಥಾವ್ರಿಗೆ ಏನು ಹೇಳಬೇಕು?'' ಎಂದು ಸ್ವಲ್ಪ ಗಟ್ಟಿಯಾಗೇ ಗೊಣಗುಟ್ಟಿದರು. ತಕ್ಷಣ, ಅವರ cell phone ಟ್ರಿಣ್‌ಗುಟ್ಟಿತು!!

ವಾಗರ್ಥ

– ಎನ್. ಪ್ರಕಾಶ್

ಶಬ್ದ
ಜೋತು ಬೀಳುವುದಿಲ್ಲ
ಒಂದೇ ಅರ್ಥಕ್ಕೆ
ಒಂದೇ ಸತಿನೇಮ
ಹಿಡಿದ ರಾಮನ ಹಾಗೆ
ಶಬ್ದ
ಕೃಷ್ಣನ ಹಾಗೆ
ವ್ಯಕ್ತ
ಮಧ್ಯದಲಿ ಶಬ್ದ ಬಿಂದು
ಅರ್ಥಗಳ ಗೋಪಿಯರೊಡನೆ
ಎಡಕ್ಕೊಮ್ಮೆ ಬಲಕ್ಕೊಮ್ಮೆ
ಹಿಂದೊಮ್ಮೆ ಮುಂದೊಮ್ಮೆ
ಮತ್ತೆ ಮೇಲಕ್ಕೊಮ್ಮೆ ಕೆಳಕ್ಕೊಮ್ಮೆ
ತೂರುವುದು ತೊನೆಯುವುದು
ನಾಟ್ಯವಾಡುವುದು
ಈ ಲಾಸ್ಯ
ಆನಂದದ ಭಾಷ್ಯ

ಮುಳ್ಳೂರಿನ ಏಸ್ ಶಿಕಾರಿ ಎಂಕ್ಟಪ್ಪ

- ಶಂ.ಭಂ. ಕೃಷ್ಣಮೂರ್ತಿ

ಕಾಲಿಗೆ ಕಾಲು ಮಣದ ಪಾಪಾಸು, ತಲೆಗೆ ಅರ್ಧ ಕಿಲೋ ವಜನ್ನಿನ ಹೆಲ್ಮೆಟ್, ಉಣ್ಣೆಯ ಥರಹೇವಾರಿ ಷರಟಿನ ಮೇಲೆ ಹುಲಿ ಚರ್ಮದ ವೇಸ್ಟನ್ನು ತೊಟ್ಟು, ನಲವತ್ತೆಂಟು ಕಡೆ ಜೇಬುಗಳಿರುವ ದೊಗಲೆ ಶರಾಯಿಯನ್ನು ಧರಿಸಿಕೊಂಡು, ನಡುವಿಗೆ ಬುಲೆಟ್ ಬೆಲ್ಟ್ ಬಿಗಿದುಕೊಂಡು, ವಾಟರ್ ಬಾಟಲ್ ಒಂದು ಬಗಲಿಗೆ, ಓಬೀರಾಯನ ಕಾಲದ ಕೋವಿಯನ್ನು ಇನ್ನೊಂದು ಬಗಲಿಗೆ ತೂಗಿಸಿಕೊಂಡು ಪೂರ್ಣ ಶಿಕಾರಿ ವೇಷದೊಂದಿಗೆ ಏದುಸಿರು ಬಿಡುತ್ತಾ ಮನೆಯಲ್ಲಿ ಚಕ್ಲಮಟ್ಲ ಹಾಕಿಕೊಂಡು ಕೂತಿದ್ದ ಸ್ವಯಂ ಘೋಷಿತ ಶಿಕಾರಿ ಎಂಕ್ಟಪ್ಪನನ್ನು ನೋಡಿ ನನಗೆ ಬಲು ಅಚ್ಚರಿಯಾಯ್ತು. ಕೊರೆಯುವ ಛಳಿಯಲ್ಲೂ ಅವನ ಹಣೆಯಿಂದ ಧಾರಾಕಾರವಾಗಿ ಬೆವರು ಸುರಿಯುತ್ತಿತ್ತು.

''ಇದೇನು ಸ್ವಾಮಿ, ಹುಲಿ ಶಿಕಾರಿಗೆ ಹೊರಟಿದ್ದೀರೇನು'' ಎಂದು ನಾನು ವ್ಯಂಗ್ಯವಾಗಿ ಚುಚ್ಚಿದೆ. ಕೊರವಂಜಿ ಕಾಲದಿಂದಲೂ ನನಗೆ ಅವನ ಮತ್ತು ಅವನ ಶಿಕಾರಿಯ ವಿಷಯ ಚೆನ್ನಾಗಿ ತಿಳಿದಿತ್ತು. ಅವನು ತನ್ನ ಪ್ರಶ್ನೆಗೆ ಉತ್ತರಿಸುವಷ್ಟರಲ್ಲಿಯೇ ಅವನ ಪತ್ನಿ ''ಉಲಿ ಅಲ್ಲ ಅಣ್ಣಾವ್ರೆ, ಅಷ್ಟೊತ್ತಿಂದ ಇಲಿ ಬ್ಯಾಟೆ ಆಡ್ತಾ ಕುಂತವ್ರೆ'' ಎಂದು ಕಿಸಕ್ಕನೆ ನಕ್ಕಳು. ''ಇಲಿ ಬೇಟೆಗೆ ಈ ವೇಷಭೂಷಣ ಯಾಕೆ ಎಂಕ್ಟಪ್ಪನೋರೆ?'' ''ಈ ಯೂನಿಫಾರಂ ಆಕ್ಕೊದಿದ್ರೆ, ಯಾವ ನನ್ಮಗ ನನ್ನ ಶಿಕಾರೀಂತ ಕರೆದಾನು ಯೋಳಿ ಮತ್ತೆ...'' ಎಂದು ಅವನು ಹೇಳಿದಾಗ ಅವನ ವಾದ ಸರಿಯೆಂದೇ ನನಗೆ ತೋರಿತು. ಬಡಕಲು ದೇಹ, ಕದರು ಕಡ್ಡಿ ಮೀಸೆಯ ಎಂಕ್ಟಪ್ಪನನ್ನು ಶಿಕಾರಿ ವೇಷವಿಲ್ಲದಿದ್ರೆ ಯಾವನು ತಾನೆ ಅವನನ್ನು ಬೇಟೆಗಾಟರ ಎಂದು ಹೇಳಿಯಾನು. ಹೊರವಾದ ಪೊದೆ ಮೀಸೆಯಿಲ್ಲದಿದ್ರೆ, ಕಾಡುಗಳ್ಳ ವೀರಪ್ಪನನ್ನು ಯಾರು ತಾನೇ ಗುರುತಿಸಲು ಸಾಧ್ಯ?

''ಇಲಿ ಸಿಕ್ತೇನು?'' ಎಂದು ನಾನು ವಿಷಯಕ್ಕೆ ಬಂದೆ.

''ಪೋಲೀಸಿನೋರ್ಗೆ ಕಾಡುಗಳ್ಳ ವೀರಪ್ಪ ಸಿಕ್ಕವ್ನ ಅಮೆರಿಕಾದೋರ್ಗೆ ಲಾಡೆನ್ ಸಿಕ್ಕವ್ನ?'' ಎಂದು ಮರು ಪ್ರಶ್ನೆ ಹಾಕಿದ ಎಂಕ್ಟಪ್ಪ.


''ಅದಕ್ಕೂ ನಿಮ್ಮ ಮನೆ ಸುಂಡಿಲೀನ ಹಿಡಿಯೋಕು ಏನು ಸ್ವಾಮಿ ಸಂಬಂಧ?'' ಎಂದು ನಾನು ದಬಾಯಿಸಿದೆ.

''ವೀರಪ್ಪ ಇಲಿ ಅಂಗೆ ಸರ್ಕಾರಾನ ಅತ್ತು ವರ್ಷದಿಂದ ಕಾಡ್ತಾ ಅವ್ನೆ. ಅಂಗೆ ನಮ್ಮ ಮನೆಯಾಗಿ ನನ್ನ ಅತ್ತು ದಿನದಿಂದ ಇಲಿ ಕಾಡ್ತಾ ಐತೆ... ಇದೇ ಸಂಬಂಧ...'' ಎಂದ ಎಂಕ್ಟಪ್ಪ.

ಪ್ರತಿಯೊಂದಕ್ಕೂ ಇವನ ಮನೆ ಮೂಷಕನನ್ನು ಅವರಿವರಿಗೆ ಹೋಲಿಸುತ್ತಿದ್ದ ಎಂಕ್ಟಪ್ಪನನ್ನು ನೋಡಿ ನನಗೆ ರೇಗಿತು. ಕೊಂಚ ಖಾರವಾಗಿಯೇ ಹೇಳಿದೆ. ''ಅಲ್ಲಾ ಎಂಕ್ಟಪ್ಪ ನೀವು ಮುಳ್ಳೂರಿನ ಏಸ್ ಶಿಖಾರಿಗಳಾಗಿದ್ಕೊಂಡು, ಯಃಕಶ್ಚಿತ್ ಒಂದು ಸಣ್ಣ ಇಲೀನ ಹಿಡಿಯೋಕೆ ಹೀಗೆ ಒದ್ದಾಡ್ತಿರೋದು ನೋಡಿದ್ರೆ ನಾಚಿಕೆಯಾಗುತ್ತೆ ಸ್ವಾಮಿ...'' ಎಂದು ಚುಡಾಯಿಸಿದೆ. ''ಅಂಗೆ ಇಡಿಯಾಕೆ ಅದೇನು ಉಲೀನಾ, ಕಳ್ಳೀನಾ. ಯೋಳಿಕೇಳಿ ಸುಂಡಿಲಿ. ಇಲ್ಲಿ ಕಾಣಿಸ್ತದೆ. ಕೋವಿ ಎತ್ತಿ ಗುರಿ ಮಡ್ಗೋದ್ರಾಗೆ ಯಾವ್ದೋ ಬಿಲ್ದಾಗೆ ಒಕ್ಕೊಳ್ತದೆ. ಉಲೀನಾರ ಇಡೀಬೋದು. ಇಲ್ಲಿ ಇಡಿಯೋದು ಐತಲ್ಲಾ ಅದೆಲ್ಲಾ ನೀವು ಯೋಚ್ಸೋ ಅಸ್ಟು ಸುಲಭ ಅಲ್ಲ ಸೋಮಿ. ಅದಿನೆಂಟು ಚದರ ಮೈಲಿ ಚೌಕರ್ಷಿನಾಗಿ ಇರೋ ನೂರೆಂಟು ಬಿಲ್ದಾಗೆ ಅವಿಕ್ಕೊಂಡಿರೋ ವೀರಪ್ಪನ ಇಡಿಯೋಕೆ ಟಾಸ್ಕ್‌ಫೋರ್ಸಿಗೆ ಎಂಗೆ ಕಸ್ಟ ಆಗೈತೋ, ಅಂಗೇ ಈ ಎಂಟು ಚದುರಡಿ ಮನ್ಯಾಗೆ ಅತ್ತಾರು ಬಿಲಗೋಳ್ನ ಮಾಡ್ಕಂಡಿರೋ ಇಲೀನ ಇಡಿಯೋದೂ ಅಸ್ಟೇ ಕಸ್ಟ ಐತೆ, ತಿಳಿತ್ರಾ...'' ಎಂದು ಧಾರಾಕಾರವಾಗಿ ಹರಿಯುತ್ತಿದ್ದ ಬೆವರನ್ನು ತನ್ನ ಯೂನಿಫಾರಂನಿಂದಲೇ ಒರಸಿಕೊಂಡ.

ಆ ವೇಳೆಗೆ ಕಿಟಕಿಯಲ್ಲಿ ಕೂತು ನಮ್ಮನ್ನೇ ನೋಡುತ್ತಿದ್ದ ಇಲಿ, ವೆಂಕ್ಟಪ್ಪ ನಾಸ್ಟಕ್ಕೆ ಇಟ್ಟುಕೊಂಡಿದ್ದ ಬೆಣ್ಣೆ ಸವರಿದ ಬ್ರೆಡ್ ಸ್ಲೈಸನ್ನು ಕಚ್ಚಿಕೊಂಡು ಚಂಗನೆ ನೆಗೆದು ಓಡಿ ಯಾವುದೋ ಬಿಲದಲ್ಲಿ ಹೊಕ್ಕಿಕೊಂಡಿತು. ಎಂಕ್ಟಪ್ಪ ''ಇಲೀ ಇಲೀ'' ಎಂದು ಕೂಗುತ್ತಾ ಕೋವಿ ಎತ್ತಿಕೊಂಡು ಆ ಕಡೆಗೆ ಧಾವಿಸಿದ. ನೆಲದ ಮೇಲೆ ಹಾಸಿದ್ದ ಜಮಖಾನೆಗೆ ಅವನ ಬೂಟುಕಾಲು ಸಿಕ್ಕಿಕೊಂಡು ಎಡವಿ ಬಿದ್ದು ನೆಲ ಕಚ್ಚಿದ. ಭೂಶಾಯಿಯಾದ ಅವನನ್ನು ಅವನ ಮಣ ಭಾರದ ವೇಷದೊಂದಿಗೆ ಮೇಲೆತ್ತಿ ಕೂಡಿಸುವ ಹೊತ್ತಿಗೆ ನನಗೂ ಅವನ ಹೆಂಡತಿಗೂ ಬೆವರಿನ ಸ್ನಾನವಾಗಿ ಹೋಯಿತು.

ಮಸಲ ಪೋಲೀಸಿನವರು ವೀರಪ್ಪನನ್ನು ಈ ಸಂವತ್ಸರದೊಳಗೇ ಹಿಡಿದರೂ ಹಿಡಿಬಹುದು, ಆದ್ರೆ ಹಂಟರ್ ಎಂಕ್ಟಪ್ಪ ಅವನ ಮನೆಯಲ್ಲಿ ಹೊಕ್ಕಿರುವ ಮೂಷಕವನ್ನು ಹಿಡಿದಾನೆಯೇ ಅನ್ನುವುದನ್ನು ಖಾತ್ರಿಯಾಗಿ ಹೇಳುವುದು ಸಾಧ್ಯವಿಲ್ಲ.



ರಾ.ಶಿ. ಅವರ ಜೊತೆ

– ಪ್ರಕಾಶ್

ಆ ದಿನ ಕ್ಲಿನಿಕ್ಕಿನಲ್ಲಿ ಜನರೇ ಇಲ್ಲ. ಸದಾ ತುಂಬಿ ತುಳುಕುತ್ತಿದ್ದ ಕ್ಲಿನಿಕ್ ಹೀಗೇಕೆ? ಶಿವರಾಂ ಹೇಳಿದರು: 'ಇವತ್ತು ಹಬ್ಬ ಕಣೋ! ಅದಕ್ಕೇ ಜನ ಕಮ್ಮಿ! ಇದೂ ಯೋಚನೆ ಮಾಡಬೇಕಾದ ವಿಷಯ. ನಾಳೆ ತಿರ್ಗಾ ಎಲ್ಲರೂ ಬರ್ತಾರೆ! ಅಂದ್ರೆ, ಇವತ್ತು ಹಬ್ಬದ ಸಂಭ್ರಮದಲ್ಲಿ ಸುಮಾರು ಜನಕ್ಕೆ ಕಾಯಿಲೆ ಮರ್ತೇ ಹೋಗಿರುತ್ತೆ!' ಎಂದು ನಕ್ಕರು. ಇದನ್ನೂ ಸೇರಿಸಿದರು. ''ನೋಡು, ಅವರಿಗೆ ನಮ್ಮ ಅಗತ್ಯಕ್ಕಿಂತ ಅವರ ಅಗತ್ಯ ನಮಗೆ!'' ಈ ದಿನಗಳಲ್ಲಿ ನಡೆಯುತ್ತಿರೋ ವೈದ್ಯಕೀಯ ಜಗತ್ತನ್ನ ನೋಡಿದರೆ, ಆ ಮಾತಿನಲ್ಲಿ ಎಷ್ಟು ಸತ್ಯ ಇತ್ತು ಅಂತ ಖಂಡಿತ ಗೊತ್ತಾಗುತ್ತೆ!

★★★

ಇದನ್ನ ಕಿಟ್ಟಿ ಹೇಳಿದ್ದು. ಒಬ್ಬ ಪೇಷೆಂಟ್‌ಗೆ ಇ.ಸಿ.ಜಿ. ಮಾಡಬೇಕು ಅವನಿಗೋ ಕರಡಿ ತರಹ ಎದೆಯೆಲ್ಲಾ ರೋಮಮಯ! ಇ.ಸಿ.ಜಿ. ಲೀಡ್ಸ ಹಾಕುಕ್ಕೆ ಮುಂಚೆ Shave ಮಾಡಬೇಕು. ಸರಿ, ಕಿಟ್ಟೀನೇ ನಿಧಾನವಾಗಿ ಶೇವ್ ಮಾಡಹತ್ತಿದರು. ರಾ.ಶಿ. ಬಂದು ನೋಡಿದರು. ಆಮೇಲೆ, ಪರವಾಗಿಲ್ಲ ಕಣೋ, ಡಾಕ್ಟರ್ ಕೆಲಸ ಸರಿಹೋಗದೆ ಇದ್ರೆ ಹಜಾಮನ ಕೆಲಸದಲ್ಲಿ ಬದುಕಬಹುದು ಅಂತ ನಕ್ಕರು!

★★★

ಕ್ಲಿನಿಕ್‌ನ ಅಕೌಂಟ್ ಪುಸ್ತಕದಲ್ಲಿ ಒಂದು ವಿಶೇಷ ಕಾಲಂ ಇತ್ತು ಅದೇ "suspense account' 'ಇದೇನಪ್ಪ?' ಅಂತ ಮುಗ್ಧನಾಗಿ ಕೇಳಿದೆ. 'ಅಯ್ಯೋ, ಅದು ಎರಡು ತರಹ ಸಸ್ಪೆನ್ಸ್ ಕಣೋ! ಒಂದು ಆ ಹಣ ಬರುತ್ತೆ ಅಂತ ಗ್ಯಾರಂಟಿ ಇಲ್ಲ! ಬಂದರೆ ಬೋನಸ್ ತರಹ! ಇನ್ನೊಂದು, ಆ ಪೇಷೆಂಟ್ ವಾಪಸ್ ಬರದೇನೇ ಇದ್ರೆ, ಜಿಪುಣತನದಿಂದಾನೋ ಅಥವಾ ಕಾಯಿಲೆ ವಾಸಿಯಾಗ್ದೆ ಬೇರೆ ಕಡೆ ಹೋಗಿದಾನೋ ಅಂತ!' 'ಎಷ್ಟು ಜನ ವಾಪಸ್ ಬಂದು ಆ ಸಸ್ಪೆನ್ಸ್‌ಗೆ ತೆರೆ ಹಾಕ್ತಾರೆ?' ಅಂದೆ. ತಿಂಗಳಿಗೋ, ಎರಡು ತಿಂಗಳಿಗೋ ಒಬ್ಬ ಬರಬಹುದು! ಆದರೆ, That is what makes me regain in faith human nobility!' ಅಂದರು!

★★★

ಅಪ್ಪನ ಹತ್ರ ಒಂದು ಬಿಳೀ ಡಾಕ್ಟರ್ ಕೋಟು ಇತ್ತು. ಅದು ಯಾವಾಗಲೂ Hanger ನಿಂದ ಜೋತಾಡುತ್ತಿತ್ತು. 'ಯಾಕೆ ಅದನ್ನ ಧರಿಸಲ್ಲ ನೀವು?' ಅಂದೆ. ಅಲ್ಲ ಕಣೋ, ಆ ಕೋಟು ನೋಡಿದ ತಕ್ಷಣ ಮಕ್ಕಳಿಗೆ ಅಳು ಬರುತ್ತೆ! ದೊಡ್ಡವರಿಗೆ ಬಿ.ಪಿ. ಜಾಸ್ತಿ ಆಗುತ್ತೆ!' ಅಂತ (ಗಂಭೀರವಾಗಿ) ಹೇಳಿದರು. ಈಗ ಇದನ್ನೇ ಹೃದಯತಜ್ಞರು White coat hypertension ಅಂತ ಕರೀತಾರೆ!!

★★★

ಬಾರಿಸು ಕನ್ನಡ ಡಿಂಡಿಮವ!

- ಶೋಭಾ ಪ್ರಮೋದ್

''ಬಾರಿಸು ಕನ್ನಡ ಡಿಂಡಿಮವ; ಓ ಕರ್ನಾಟಕ ಹೃದಯಶಿವ''! ಎಂಬ ಕುವೆಂಪುರವರ ಕವಿತೆಯು ನನಗೆ ಹೈಸ್ಕೂಲಿನಲ್ಲಿ ಇದ್ದಿತ್ತು.

ಬ್ರಹ್ಮದೇವನು, ನನ್ನ ಹಣೆಯ ಬರೆಹವನ್ನು ಬರೆಯಬೇಕಾದರೆ, ತಪ್ಪಿ, ಮರಾಠಿ ಹುಡುಗನೇ ವರ ಸಿಗುತ್ತಾನೆಂದು ಬರೆದ ಕಾರಣ, ಮಹಾರಾಷ್ಟ್ರದಲ್ಲಿ ವರ ಮಹಾಶಯನು ದೊರಕಿದನು. ನನ್ನ ವಿವಾಹವಾಗಿ ಹನ್ನೆರಡು ವರ್ಷವಾಯಿತು. ಆದರೆ ಅದು ''ವನವಾಸ'' ವಾಗದೆ, ಮಧುಮಾಸವೇ ಆಗಿದೆ ಎಂದು ಬರೆಯಲು ಹೆಮ್ಮೆ ಎನ್ನಿಸುತ್ತೆ:

ನನ್ನ ಪತಿ, ಗೌಡ ಸಾರಸ್ವತ ಬ್ರಾಹ್ಮಣರಾದರೂ, ಮಹಾರಾಷ್ಟ್ರದಲ್ಲಿಯೇ ಜನಿಸಿದ ಕಾರಣಕ್ಕಾಗಿ, ಕೊಂಕಣಿಯ ಗಂಧಗಾಳಿ ಗೊತ್ತಿಲ್ಲದವರು! ಕನ್ನಡದ ಅ,ಆ ಕೂಡ ಅರಿಯದವರು. ಇದು ಒಂದರ್ಥದಲ್ಲಿಯೇ ಒಳ್ಳೆಯದೇ ಆಯ್ತು ಸ್ವಾಮಿ! ಕಾರಣ, ನನ್ನ ಕವಿತೆ, ಕಥೆ ಓದುವ ಅಭಿಮಾನಿಗಳು, ನಾನು ಅವಿವಾಹಿತಳೆಂದು ತಿಳಿದು, ಪ್ರೇಮಪತ್ರ ಕೂಡ ಬರೆದು ಪಾವನರಾಗಿದ್ದಾರೆ! ಪತಿಗೆ ಇದು ಗೊತ್ತಾದರೆ ಅವಸ್ಥೆ ಏನಾಗುತ್ತಿತ್ತೆಂದು ನಿಮ್ಮ ಊಹೆಗೇ ಬಿಟ್ಟಿದ್ದೇನೆ.

ಹೈಸ್ಕೂಲಿನಲ್ಲಿ ನಾನು, ಸಂಸ್ಕೃತ ಬೋಧಿಸುತ್ತೇನೆ. ಬಹುತೇಕ ಶಿಕ್ಷಕರು, ''ನಿಮ್ಮ ಮರಾಠಿ ಚೆನ್ನಾಗಿದೆ. ಕನ್ನಡದವರು ಎಂದು ಅನ್ನಿಸುವುದೇ ಇಲ್ಲ'' ಎಂದು ಹೊಗಳಿ ಹೊನ್ನಶೂಲಕ್ಕೆ ಏರಿಸುತ್ತಾರೆ. ''ವಿವಾಹವಾದ ಹೊಸತಿನಲ್ಲಿ ನಿಮಗೆ ಮರಾಠಿ ಬರುತ್ತಿರಲಿಲ್ಲ, ಆಗ ನಿಮ್ಮದು ಹೇಗೆ ಹೊಂದಾಣಿಕೆಯಾಯಿತು?'' ಎಂದು ಅನೇಕರು ಪ್ರಶ್ನಿಸಿದ್ದಾರೆ! ''ಹೊಂದಾಣಿಕೆ'' ಎಂದರೆ ಏನು? ಎಂದು ನಾನವರಿಗೇ ಮರು ಪ್ರಶ್ನಿಸಿ ಕಂಗಾಲುಗೊಳಿಸಿದ್ದೇನೆ ಎನ್ನಿ. ಆರು, ಏಳು, ಎಂಟು, ಒಂಭತ್ತು, ಹತ್ತು ಕ್ಲಾಸಿನ ವಿದ್ಯಾರ್ಥಿಗಳ ಒಂದು ನೋಟ್ ಬುಕ್ಕಿನಲ್ಲಿ ಅವರ ಪೂರ್ಣ ಹೆಸರನ್ನು ಕನ್ನಡದಲ್ಲಿ ಬರೆದುಕೊಡುತ್ತೇನೆ. ಇದರಿಂದಾಗಿ, ಎಲ್ಲ ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೂ ನಾನೆಂದರೆ ಪ್ರೀತಿ. ಅವರು ಗುಲಾಬಿ ಹೂ, ಸಂಪಿಗೆ ಹೂ ತಂದುಕೊಡುವುದೂ ಉಂಟು. ''ಕೊ0ತ್ತಂಬರಿ ಸೊಪ್ಪಿನ'' ಕೇಶರಾಶಿಯ ನಾನು ಹೂ ಮುಡಿದುಕೊಳ್ಳದಿದ್ದರೂ, ಇದಕ್ಕೆ ಕಾರಣಳಾದ ಕನ್ನಡಾಂಬೆಗೆ ನಮಿಸಿದ್ದೇನೆ! ಬಹುತೇಕ ವಿದ್ಯಾರ್ಥಿಗಳು ತಮ್ಮ ಹೆಸರು ಬರೆದುಕೊಳ್ಳಲು ಕಲಿತಿದ್ದಾರೆ. ಕನ್ನಡಾಂಬೆಯ ಧ್ವಜವನ್ನು ರಾಯಗಡ್‌ದಲ್ಲಿ ಹಾರಿಸಿದ್ದೇನೆ ಎಂಬ ಆತ್ಮ ತೃಪ್ತಿ ಖಂಡಿತ ಇದೆ.

ತರಂಗ, ಸುಧಾ, ಮಂಗಳ, ತುಷಾರ, ವಿವೇಕಹಂಸ, ಮಂಜುವಾಣಿ, ಪಂಚ್ನಾದಾಯಿ ಇತ್ಯಾದಿ ಪತ್ರಿಕೆಗಳನ್ನು ಓದುತ್ತೇನೆ. ತರಂಗದಲ್ಲಿ ಬಂದ ಲೇಖನಗಳ ಅನುವಾದ ಮಾಡಿ,

ಶಿಕ್ಷಕರಿಗೆ ಹೇಳಿದಾಗ, ''ನಿಮ್ಮ ಭಾಷೆಗಳ ಪತ್ರಿಕೆಗಳ ದರ್ಜೆ ಅತ್ಯುತ್ತಮ ಮಟ್ಟದಲ್ಲಿದೆ'' ಎಂದಾಗ, ನಾನೇ ಆ ಪತ್ರಿಕೆಯ ಒಡತಿ ಎಂಬಂತೆ ಹಿರಿ ಹಿರಿ ಹಿಗ್ಗಿದ್ದೇನೆ.

''ಬೆಳಗಾಂ'' ಮಹಾರಾಷ್ಟ್ರಕ್ಕೆ ಸೇರಬೇಕೆಂದು ನನ್ನವರು ವಾದಿಸುತ್ತಾರೆ. ''ಅದೆಂದಿಗೂ ಕನ್ನಡಿಗರದ್ದೇ ಸೊತ್ತು. ನಾವು ಕೊಡುವುದಿಲ್ಲ'' ಎಂದು ಜಗಳ ಮಾಡುತ್ತೇನೆ. ಹೀಗೆಯೇ ನಮ್ಮ ದುಕಾನಿನಲ್ಲಿ ಸೇಲ್ಸ್ ಆಫೀಸರರ ಮುಂದೆ ಜಗಳವಾಯ್ತು. ಆಗ ಆ ಸೇಲ್ಸ್ ಆಫೀಸರರು, ''ನಿಮ್ಮಾಕೆಯ ಕನ್ನಡಾಭಿಮಾನಕ್ಕೆ Hats off'' ಎನ್ನುತ್ತೇನೆ ಎಂದು ಕೈ ಕುಲುಕಿಯೇ ಬಿಟ್ಟರು. ಮತ್ತೊಮ್ಮೆ ಇನ್ನೊಬ್ಬ ಅಧಿಕಾರಿಗಳು, ''ಇವರನ್ನೇ ಈಗ ಪಾರ್ಸಲ್ ಮಾಡಿ ಕರ್ನಾಟಕಕ್ಕೆ ರವಾನಿಸಿರಿ'' ಎಂದೂ ತಮಾಷೆ ಮಾಡಿದರು. ಆಗ ನಾನವರಿಗೆ, ''ನೀವು ಅಮೇರಿಕಾಕ್ಕೆ ಹೋದಾಗ, ಯಾರಾದರೂ ಮರಾಠಿ ಭಾಷೆಯ ಬಗ್ಗೆ, ಮುಂಬೈ- ಪುಣೆಯ ಬಗ್ಗೆ ಮಾತನ್ನಾಡಿದರೆ ಸಿಟ್ಟು ಬರುವುದಿಲ್ಲವೇ? ಹಾಗೆ ಬಾರದಿದ್ದರೆ, ಆ ಮಣ್ಣಿನವರೆಂದು ಹೇಳಿಕೊಳ್ಳಲು ನೀವು ನಾಲಾಯಕ್ ಜನ'' ಎಂದು ಬಿಸಿ ಹುಟ್ಟಿಸಿದ್ದೇನೆ.

ಮರಾಠಿಗರಾದರೂ, ಪತಿಯವರು ನನ್ನ ಸಾಹಿತ್ಯ ಬಳ್ಳಿಗೆ ಪ್ರೋತ್ಸಾಹ ಎರೆದಿದ್ದಾರೆ. ನೌಕರಿಯಿಲ್ಲದಾಗ, ತಿಂಗಳಿಗೆ ನೂರು ರೂಪಾಯಿ ಅಂಚೆ ಚೀಟಿ; ಹತ್ತು ಡಜನ್ ಹಾಳೆಗಳನ್ನು ಮರೆಯದೆ ತಂದುಕೊಟ್ಟಿದ್ದಾರೆ. ಈ ತನಕ 850 ಕ್ಕಿಂತ ಹೆಚ್ಚಿನ ಬರೆಹಗಳು ಪ್ರಕಟವಾದ ಶ್ರೇಯಸ್ಸು ಅವರಿಗೇ ದೊರೆಯಬೇಕು.

ನಮ್ಮೂರಿನಲ್ಲಿ ಇಂಜಿನಿಯರ್ ಒಬ್ಬರಿದ್ದಾರೆ. ಮೂಲತಃ ಶಿವಮೊಗ್ಗದವರು. ಅವರು ಕಿವಿಮಾತು ಹೇಳಿದ್ದರು. ''ನಾನು ಕನ್ನಡದವನೆಂದು ಇಲ್ಲಿ ಯಾರಿಗೂ ಗೊತ್ತಿಲ್ಲ ಮೇಡಂ. ಇಷ್ಟವೂ ನನಗಿಲ್ಲ. ದಯವಿಟ್ಟು ಗೆಳೆಯರ ಮುಂದೆ ನೀವು ಕನ್ನಡದಲ್ಲಿ ನನ್ನೊಂದಿಗೆ ಮಾತನ್ನಾಡಲೇಬೇಡಿ'' ''ಏಕೆ?'' ಎಂದು ಮರು ಪ್ರಶ್ನಿಸಿದೆ. ''ಈ ಕಡೆಯಲ್ಲಿ ಕನ್ನಡದವರೆಂದರೆ ತಾತ್ಸಾರ ಮಾಡುತ್ತೆ. ಮೂಗು ಮುರಿಯುತ್ತಾರೆ'' ಎಂದರವರು. ಆ ಮಾತನ್ನೇ ಸವಾಲಾಗಿ ತೆಗೆದುಕೊಂಡು, ನಾನು ಹೆಮ್ಮೆಯಿಂದಲೇ ''ನಾನು ಕನ್ನಡದವಳು'' ಎನ್ನುತ್ತೇನೆ. ನಿಜವಾಗಿಯೂ, ನನಗ್ಯಾರೂ ಮೂಗು ಮುರಿದವರೇ ಇಲ್ಲ.

ಈ ಕಡೆಯ ಜನರು ''ಕಾನಡೀ'' ಎನ್ನುತ್ತಾರೆ. ಅದು ತಪ್ಪು. ಮರಾಠಿಗೆ ''ಮೀರಚಿ'' (ಮೆಣಸಿನಕಾಯಿ) ಎಂದು ಹೇಳಿದರೆ ನಿಮಗೆ ಸಿಟ್ಟು ಬರುವುದಿಲ್ಲವೇ? ಕನ್ನಡ ಎಂದು ಹೇಳಿರಿ ಎಂದು ನಾನು ತಿದ್ದಿದ್ದೇನೆ. ಒಬ್ಬ ಶಿಕ್ಷಕರಂತೂ ''ನಿಜಕ್ಕೂ ನೀವು ಖಾರ ಮೀರಚಿ ಮಾರಾಯ್ರೆ. ನಿಮ್ಮ ಭಾಷೆಯ ಬಗ್ಗೆ, ಏನಾದರೂ ಆಡಿದರೂ ಸಿಟ್ಟು ಬರುತ್ತೆ ನಿಮಗೆ. ಆ ಕೋಪದ ಖಾರದ ಅನುಭವ ನನಗೂ ಆಗಿದೆ'' ಎಂದಿದ್ದಾರೆ.

ನನ್ನಲ್ಲಿ ಬೇಕಾದಷ್ಟು ಕನ್ನಡ ಪುಸ್ತಕಗಳು, ನಿಯತಕಾಲಿಕೆಗಳು; ನೂರಕ್ಕೂ ಹೆಚ್ಚು ಕನ್ನಡ ಕ್ಯಾಸೆಟ್ಟುಗಳು ನನ್ನೊಳಗಿನ ಕನ್ನಡ ಉಸಿರನ್ನು ಸದಾ ಹಸಿರಾಗಿಸಿವೆ ಎಂದರೆ ತಪ್ಪಿಲ್ಲ.

ಹೆತ್ತಮ್ಮ ಬಹಳ ದೂರದಲ್ಲಿದ್ದರೆ ಅಮ್ಮನ ನೆನಪು ಗಾಢವಾಗುತ್ತದೆ ಅಂತೆ. ನನ್ನ ಹೆತ್ತವರು ಮಡಿಕೇರಿಯ ತಂಪಿನಲ್ಲಿದ್ದರೆ, ನಾನಿಲ್ಲಿ ರಾಯಘಟದ 'ಬಿಸಿ'ಯಲ್ಲಿದ್ದೇನೆ. ಹಾಗೆಯೇ ಮಗನ (ಆತ ಬುದ್ಧಿಮಾಂದ್ಯ) ಸಮಸ್ಯೆಯಿಂದಾಗಿ, ನಾನು ಕರ್ನಾಟಕಕ್ಕೆ ಹೋಗದೆ, ಹನ್ನೆರಡು ವರ್ಷಗಳಾದವು. ಹಾಗಾಗಿ ಆ ಕನ್ನಡಾಂಬೆಯ ನೆನಪಿನಿಂದ ಮನಸ್ಸು ವ್ಯಾಕುಗೊಳ್ಳುತ್ತದೆ. ನಾನು ಹುಟ್ಟಿ - ಬೆಳದ ಕುಮಟಾದಲ್ಲಿ ಈಗ ಎಷ್ಟು ಪ್ರಗತಿಯಾಗಿರಬಹುದು? ಪ್ರಾಧ್ಯಾಪಕರು, ಪ್ರಾಂಶುಪಾಲರು ನಿವೃತ್ತರಾಗಿಬಹುದೇ? ಎಂದೆಲ್ಲ ನೆನಪಿನ ಗಾಢ ಕಣಿವೆಯಲ್ಲಿ ಆಗಾಗ ಬೀಳುವಾಗ, ಪುಳಕಗೊಳ್ಳುತ್ತೇನೆ.

ಕೊನೆಯುಸಿರು ಇರೋತನಕ, ಕನ್ನಡದಲ್ಲಿಯೇ ಬರೆಯಬೇಕು. ಕನ್ನಡಾಂಬೆಯ ಹಿರಿಮೆಯನ್ನು ಮರಾಠಿಗರಿಗೆ ಹೇಳಬೇಕು ಎಂಬ ಇಚ್ಛೆ ನನಗಿದೆ. ಜಯಹೇ ಕರ್ನಾಟಕ ಮಾತೆ!!



ಜೀನಿ ಕರೆಯುಕ್ಕೆ ಉಜ್ಜಿ
- ಒಂದು ಬಾರಿ

ಆಶೆ ಈಡೇರಿಸಬೇಕಾದರೆ
- ಎರಡು ಬಾರಿ

ಮಿಕ್ಕ ಎಲ್ಲಾ ಪ್ರಶ್ನೆಗಳಿಗೂ
- ಮೂರು ಬಾರಿ

ಅಬ್ಬಕ್ಕನ ಪಜೀತಿ

– ವಿಜಯ ಸಚ್ಚಿದಾನಂದ

ಮಡಿವಂತೆ ಅಬ್ಬಕ್ಕ ಮೊದಲ ಬಾರಿ ಡೆಲ್ಲಿಗೆ ಹೋದಾಗ ಆದ ಪಜೀತಿ ಅಷ್ಟಿಷ್ಟಲ್ಲ ಅವರು ಮಾಡುತ್ತಿದ್ದ ಪೂಜೆ ಪುನಸ್ಕಾರ - ಆ ಚರ್ಪಿನ ಭರಾಟ ಅಂದ್ರೇನು ಸಾಮಾನ್ಯವೇ! ಹಿಂದೆ ಒಂದು ಗಾದೆ ಹೇಳ್ತಾಯಿದ್ರು - ''ಒಬ್ಬಾರ ತಲೇ ಮೇಲೆ ಗುಬ್ಬಚ್ಚಿ ಕುಂತ್ಕೆತೆ ಹಬ್ಬಾವ ಮಾಡೋ ಹಾರುವಯ್ಯ'' - ಅಂತ, ಹಾಗೆ ನಮ್ಮ ಅಬ್ಬಕ್ಕಂಗೆ ಗುಬ್ಬಚ್ಚಿ ಕೂರೋ ಕಾರಣಾನೂ ಬೇಕಾಗಿರಲಿಲ್ಲ ಹಬ್ಬ ಮಾಡೋದಕ್ಕೆ! (ಈಗ ಗುಬ್ಬಚ್ಚಿಗಳೂ ಇಲ್ವಲ್ಲಾ!) ಭರ್ಜರಿ ಪೂಜೆ ಮಾಡೋದು - ಅಕ್ಕ ಪಕ್ಕ ದೂರನ್ನೆಲ್ಲಾ ಆಮಂತ್ರಿಸೋದು - ಜೋರಾದ ಊಟ ಬಡ್ಸೋದು - ಬಂದೋರ ಹೊಟ್ಟೆ ತಂಪು ಮಾಡೋದೆ ಅವರ ನಿತ್ಯ ಕರ್ಮ. ಅದರಲ್ಲಿ maximum ಲಾಭ ಪಡೀತಾಯಿದ್ದೋರೂಂದ್ರೆ, ನಮ್ಮ ಮತೋಶ್ರೀಯೋರು. ನಮ್ಮ ಮಾತೋಶ್ರೀಯವರಿಗೂ ಮತ್ತು ಅಬ್ಬಕ್ಕನವರಿಗೂ ಏನು ಸಂಬಂಧಾಂತ ನೀವು ಕೇಳೂದಾದ್ರೆ, ಅವರಿಬ್ಬರೂ ಲಂಗದ ದೋಸ್ತಿಗಳು. ಚಿಕ್ಕ ವಯಸ್ಸಿನಲ್ಲಿ ತಿಪಟೂರಿನ ಹತ್ತಿರದ ಹಳ್ಳಿಯಲ್ಲಿ ಒಟ್ಟೊಟ್ಟಿಗೆ ಬೆಳೆದೋದು - ಓದ್ದೋರು - ಒಟ್ಟೊಟ್ಟಿಗೆ ಕುಂಟೇಬಿಲ್ಲೆ ಆಡ್ದೋರು. ಪ್ರರೋಹಿತರ ಏಕೈಕ ಮಗಳಾದ ನಮ್ಮಮ್ಮ ಪಟ್ಟಣ ಸೇರಿದೊಡನೆ ಪೂಜೆ ಪುನಸ್ಕಾರಕ್ಕೆಲ್ಲಾ ತಿಲಾಂಜಲಿ ಇಕ್ಕಿ ಕ್ಲಬ್ಬು, ಪಾರ್ಟಿ, ಸೋಶಿಯಲ್ ಸರ್ವಿಸ್ ಅಂತೆಲ್ಲಾ ಹೇಳಿ ಮುಕ್ಕಾಲು ದಿವಸವೆಲ್ಲಾ ಹೊರಗೇ ಕಳೀತಾ ಇದ್ದೋಳು. ಇನ್ನು ಅಡಿಗೆ ಮಾಡಿ ನಮ್ಮಗಳ ಹೊಟ್ಟೆ ತಣಿಸೋದಕ್ಕೆ ಪುರುಸೊತ್ತು ಇದ್ದರಲ್ವೇ! ಆಗ ನಮ್ಮ ಹೊಟ್ಟೆ ನೆರವಿಗೆ ಬರ್ತಾಯಿದ್ದದ್ದು ಅಬ್ಬಕ್ಕನ ಭರ್ಜರಿ ಊಟ. ನಮ್ಮಮ್ಮ ತಾನೂ ಕಂಠ ಪೂರ್ತಿ ಪ್ರಸಾದ ಉಂಡಿದ್ದಲ್ಲದೆ ತಾನು ಅವಳ ಹಳೇ ದೋಸ್ತು ಅನ್ನೋ ಏಕೈಕ ಕಾರಣದಿಂದಾಗಿ ಮನೆ ಮಂದಿಗೆಲ್ಲಾ ದೊಡ್ಡ ಟಿಫಿನ್ ಕ್ಯಾರಿಯರ್ ಭರ್ತಿ ಊಟ ತುಂಬಿಕೊಂಡು ಬಂದು ಫ್ರಿಜ್‌ನಲ್ಲಿ ತುಂಬ್ಸೋಳು. ಅದು ಎರಡು ದಿನಕ್ಕೆ ಆಗೋದು ಅನ್ನೂದ್ರಲ್ಲಿ ಸಂಶಯವಿಲ್ಲ. ಪುನಃ ಅಬ್ಬಕ್ಕನ ಮನೆ ಪೂಜೆ, ಊಟ - ಹೀಗೆ ಅಂಥ ಅಬ್ಬಕ್ಕ ತನ್ನ ಮಗನ ಹೊಸ ಸಂಸಾರ ಹೂಡಿಸಲು ಡೆಲ್ಲಿಗೆ ಹೋದಾಗ ನಾವು ಪಟ್ಟ ಭವಣೆ ಅಷ್ಟಿಷ್ಟಲ್ಲ! ಅಮ್ಮ ಕ್ಲಬ್ಬಿನ ಕೆಲ್ಸಕ್ಕಿಂತ ದಿನವೆಲ್ಲಾ ಹೊರಗಿದ್ದಾಗ ಒಣ ಬ್ರೆಡ್ಡನ್ನ ಕಡಿದು ತಿಂದ ದಿನವೆಷ್ಟೋ! ಹೊಟ್ಟೆ ತುಂಬದ ಖಾಲಿ ಹೊಟ್ಟೆ ಮೇಲೆ ಒದ್ದೆ ಬಟ್ಟೆ ಹಾಕ್ಕೊಂಡು ಮಲಗಿದ ದಿನಗಳೆಷ್ಟೋ! ಅಬ್ಬಕ್ಕ ಯಾಕಾದ್ರೂ ಡೆಲ್ಲಿಗೆ ಹೋದ್ರೂ - ಯಾಕಾದ್ರು ಆ 'ಕೂಸು' ಮದ್ವೆ ಮಾಡ್ಕೊಂಡ್ನೋ ಅಂತ ನಾವು ಶಾಪ ಹಾಕಿದ ದಿನಗಳೆಷ್ಟೋ!

ಆದ್ರೇನ್ಮಾಡೋದು! ಅಷ್ಟಾಗಿ ಅಬ್ಬಕ್ಕ ಏನೂ ಡೆಲ್ಲಿಗೆ ಹೋಗ್ಲೇಬೇಕೂಂತ ಹಂಬಲಿಸಿ ಹೋದೋರೇನಲ್ಲಾ! Infact, ಅವರ ಪ್ರಕಾರ ದೆಹಲಿ ಒಂದು ತರಹ ಅವರ ಮಡೀಗೆ

ಬಾರದ ಊರು. ಯಾಕೇಂದ್ರೆ, ಅಲ್ಲಿನ ಜನರ ಭಾಷೆ ಮುಸಲ್ಮಾನರ ಭಾಷೆ ತರಹ - ಅದು ಮೈಲಿಗೆ ಊರು ಅಂತ ಅವರ ಅಂಬೋಣ. ಅವರಿಗೆ ಪರಿಸ್ಥಿತಿಗೆ ಹೇಗೆ ಬಂತೂಂದ್ರೆ - ಅವರ 29ನೇ ವರ್ಷದ 'ಕೂಸಿಗೆ' (ಮಗನ್ನ ಕರೀತಾಯಿದ್ದಿದ್ದು ಹಾಗೆ) ದೆಹಲಿನಲ್ಲಿ ಕೆಲಸ ಸಿಕ್ತು. ಅಲ್ಲಿಗೆ ಹೋಗಿ ಒಂದು ವರ್ಷ ಕಳೆಯೋಕ್ಕಿಲ್ಲ ತನಗೂ ಒಂದು ಪುಟ್ಟ ಮನೆ ಇದ್ದು ಒಂದು ಮಡದಿ ಇದ್ರೆ ಈ ಹಾಳು ಹೋಟಲು ವಾಸ, ಹಾಳು ಹೋಟಲು ಊಟ ತಪ್ಪೋ ಹಾಗಿದ್ರೆ ಅನ್ನೋ ಹಂಬಲ ಶುರುವಾಯ್ತು. ಅಬ್ಬಕ್ಕನ ಕಿವಿಗೂ ತನ್ನ ಆಸೆ ಮುಟ್ಟಿಸಿದ. ಆದ್ರೆ ಅಬ್ಬಕ್ಕನಿಗೆ ತನ್ನ ಕೂಸು ಇನ್ನೂ ತನ್ನ ಸೆರಗನ್ನು ಹಿಡಿದು ಓಡಾಡೋ ಮಗು ಅನ್ನೋ ಭಾವನೆ ಇದ್ದಿದ್ದರಿಂದ ಅಷ್ಟಾಗಿ ಅವನ ಮಾತಿಗೆ ಗಮನ ಕೊಡಲಿಲ್ಲ. ಆದ್ರೆ ಮದುವೆ ವಯಸ್ಸಿನ ಗಂಡು ಹುಡುಗರಿರುವೆಡೆ ಹೆಣ್ಣು ಹುಡುಗಿಯರ ಜಾತಕ ಬರುವುದು ಸರ್ವೇ ಸಾಮಾನ್ಯವಲ್ಲವೆ? ಹಾಗೆ ಬಂದ ಜಾತಕದಲ್ಲಿದ್ದ ಒಂದು ಅಡ್ರೆಸ್ಸನ್ನ ತೆಗೆದುಕೊಂಡು ತಾನೇ ಹೆಣ್ಣು ನೋಡಲು ಹೊರಟ ಕೂಸು. ಮೊದಲು ತಂದೆ ತಾಯಿಯರಿಗೆ ಹೇಳದೆ ಹೆಣ್ಣನ್ನು ಒಬ್ಬನೇ ನೋಡಿ ಬರುವುದು - ನಂತರ ಒಪ್ಪಿಗೆಯಾದಲ್ಲಿ ಅಬ್ಬಕ್ಕನ ಹತ್ರ ವಿಷಯ ಹೇಳಿದರಾಯ್ತು! ಆಮೇಲೆ ಅಪ್ಪ ಒಪ್ಪಿದರೆಷ್ಟು ಬಿಟ್ರೆಷ್ಟು! ಅವ್ರನ್ನ ಒಪ್ಸೋ ಭಾರ ಅಬ್ಬಕ್ಕನ ಮೇಲೆ ಹಾಕಿದ್ರಾಯ್ತು ಅಂತ ಅವನ plan.

ಹುಡ್ಗಿ ಮನೇ ಮುಂದೆ ಹೋಗಿ ಒಂದ್ಐದು ನಿಮಿಷ ಹಾಗೇ ಸದ್ದು ಮಾಡದೆ ನಿಂತ. ಕೊನೆಗೆ ಧೈರ್ಯ ಮಾಡಿ ಕರೆ ಗಂಟೆ 'ಕರ್' ಅನ್ನಿಸಿದ. ಬಾಗಿಲು ತೆಗೀತು. ನೋಡ್ತಾನೇ - ಮಾಡ್ರನ್ ಊರ್ವಶೀನೋ ಮೇನಕೇನೋ ಅನ್ನೊ ತರಹ - ಈಗ TV ಸೀರಿಯಲ್‌ಗಳಲ್ಲಿ ಹುಡ್ಗೀರುಗಳು ಬರೋಲ್ವೇ ಹಾಗೆ full get-up ನಲ್ಲಿರೋ ಹುಡ್ಗಿ ತನ್ನ short bob ಮೇಲೆ ಕೈ ಆಡಿಸ್ತಾ, ರಂಗು ಬಳೆದಿದ್ದ ತುಟಿಗಳನ್ನು ಚೂಪುಗೊಳಿಸ್ತಾ, ಟ್ರಿಂ ಮಾಡಿದ್ದ ಹುಬ್ಬುಗಳನ್ನ ಎತ್ತಿ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದ.ಳಂತೆ. ಆಗ್ಲೆ ಅಬ್ಬಕ್ಕನ್ನ ಕೂಸು bowled over. ತುಂಬಾ ವರ್ಷಗಳ ಪರಿಚಿತಸ್ಥರಂತೆ ಮಾತಾಡ್ಸಿದಳು. ಆಮೇಲೆ ಕಣ್ಣುಗಳನ್ನು ಪಟ ಪಟ ಹೊಡೀತಾ ಓರೆಗಣ್ಣಿನಲ್ಲಿ ಇವನನ್ನೇ ನೋಡ್ತಾ 'ತುಂ ಬಿನ್ ಜಾವೂ ಕಹಾಂ.' ಅಂತ ಹಿಂದಿ ಹಾಡು ಬೇರೆ ಹಾಡದ್ಲಂತೆ. ಅಷ್ಟು ಹೊತ್ತಿಗೆ ಅವ್ರಪ್ಪ ಎಲ್ಲಿದ್ನೋ ಬಂದ್ನಂತೆ. ಅವ್ನಿಗೆ ಅಬ್ಬಕ್ಕನ ಕೂಸು ಇದೂಂತ ಅರಿವಾಗ್ಹೋಯ್ತೊ - ಬಕ್ರ ಬುಟ್ಟೀಗೆ ಬಿದ್ದಿದೆ ಅಂತ ಗೊತ್ತಾಯ್ತು! ಇದೇ ಸಮಯ ಭಾವಿ ಮಾವ ಬಿಟ್ಟ ಬಾಣ - ನೂರು ಸುಳ್ಳೇಳಿ ಒಂದು ಮದ್ವೆ ಮಾಡೂ ಅನ್ನೊ ಗಾದೆ ತರಹ ಹೊಡೆದ ಮೊದಲನೇ ಸುಳ್ಳು "ಎಷ್ಟು ಜಾಣೇ ಅಂತೀರಿ ಇವ್ಳು! ಓದು ಬರಹ ಅಡಿಗೆ ಕೆಲ್ಸ ಎಲ್ಲಾದ್ರಲ್ಲೂ ಸೈ! ಅದ್ರಲ್ಲೂ ಹಿಂದಿ ಭಾಷೆ ಎಷ್ಟು ಚೆನ್ನಾಗಿ ಮಾತಾಡ್ತಾಳೆ ಅಳಿಯಂದ್ರೆ! ಅಲ್ಲಿರೋರಿಗಿಂತ್ಲೂ ಚೆನ್ನಾಗಿ ಮಾತಾಡ್ತಾಳೇ ಅಂತೀನೀ! ನಿಮ್ಮಿಬ್ಬರ ಜೋಡಿ ಮಾಡ್ಸಿಟ್ಟ ಹಾಗಿದೆ" ಅಂತೆಲ್ಲಾ ಬೊಗಳೆ ಹೊಡೆದು ಕೂಸನ್ನ ಉಬ್ಬಿಸಿದ. 'ಅಳಿಯಂದಿರೇ' ಅನ್ನೋ ಸಂಭೋದನೆ ಕೇಳಿ ನಮ್ಮ ಕೂಸು ಹಿಗ್ಗೋಯ್ತು. ಅಷ್ಟು ಹೊತ್ತೂ ಅಲ್ಲೇ ಕೂತಿದ್ದ ಮಗಳು ಏನೂ

ಅರ್ಥವಾಗದವಳಂತೆ ತನ್ನ ಉದ್ದವಾಗಿ ಬೆಳೆಸಿದ್ದ ಉಗುರುಗಳಿಗೆ ಬಳಿದಿದ್ದ ಚಾಕಲೇಟ್ ಕಲರ್‌ನ್ನು ನೋಡುತ್ತಾ ಹಿಗ್ಗುತ್ತಾ ಕುಳಿತಿತ್ತು. ಕೂಸಿಗೆ ಅದ್ಯಾವುದೂ ಕಿವಿ ಮೇಲೆ ಬೀಳ್ತಾನೇ ಇರಲಿಲ್ಲ. ಅವನ ಕಣ್ಣೆಲ್ಲಾ ಅವಳ ಮೇಲೆ ನಟ್ಟಿತ್ತು. ಅವಳನ್ನೇ ನೋಡ್ತಾ 'ಬೈ ಬೈ' ಅಂತ ಕೈ ಬೀಸ್ತಾ ಹೊಸಲನ್ನೂ ಗಮನಿಸದೆ ಎಡವಿಕೊಂಡು ಹೊರ ಬಂದಾಗಲೇ ಅವನಿಗೆ ಗಂಟು ಬಿದ್ದದ್ದು ಅವನ ಲಂಗೋಟಿ ಸ್ನೇಹಿತ - ರವಿ.

''ಏನೋ ಮರಿ! ಆ ಬಣ್ಣದ ಬೀಸಣಿಗೇನ ನೋಡೋದಕ್ಕೆ ಬಂದಿದ್ಯೇನೋ! ಹುಷಾರ್ ಒಪ್ಕೊಂಡ್ಬಿಟ್ಟೀಯ! ಅದಕ್ಕೆ ಬುದ್ಧಿಗಿಂತ ಬೆಳವಣಿಗೆಯೇ ಜೋರು ಕಣೋ ಕಷ್ಟಪಟ್ಟು ಮೂರನೇ ಅಟೆಂಪ್ಟ್‌ನಲ್ಲಿ ಮೂವತ್ತು ನಂಬರಿನಿಂದ SSLC ಪಾಸ್ಮಾಡಿದೆ ಕಣೋ. ಅದಕ್ಕೆ ವಿದ್ಯಾ ನೇವೇದ್ಯವೇ!'' ಅಂದು. ''ಗೊತ್ತೇನೋ ನಿಂಗೆ ಪ್ಯಾರಾಚೂಟಿನಿಂದ ಇದರ ಜೊತೆ ಇನ್ನು ನಾಕು ಹುಡುಗಿಯರನ್ನ ದುಮುಕಿಸಿದರೆ ಎಲ್ರೂ ಕಾಲ್ಮೇಲೆ ಬಂದು ನಿಲ್ತಾರಂತೆ ಆದ್ರೆ ಇದ್ಮಾತ್ರ ತಲೆ ಮೇಲೆ ಬಂದು ನಿಲ್ಲುತ್ತಂತೆ! ಯಾಕ್ಹೇಳು - ಇದ್ರ ತಲೆ ಖಾಲಿ ಕಣೋ! light ಆಗಿರುತ್ತೆ ನೋಡು!''ಅಂತ ಗಹಗಹಿಸಿ ನಕ್ಕು ಇವ್ನ ಬೆನ್ಮೇಲಿ ಹೊಡ್ದು ಅಲ್ಲಿಂದ ಜಾಗ ಖಾಲಿ ಮಾಡ್ದ. ಇವನ್ಮಾತ್ಯಾವುದೂ ನಮ್ಮ ಕೂಸಿನ ಕಿವಿಗೆ ಬಿದ್ದಹಾಗೆ ಕಾಣಲಿಲ್ಲ. ಆಮೇಲೆ ಅಬ್ಬಕ್ಕ ಪಾಪ! ತುಂಬಿದ ಕಂಗಳಿಂದಲೇ ತನ್ನ ಕೂಸಿನ ಕೈಯಿಂದ ಹುಡ್ಗೀಗೆ ತಾಳಿ ಬಿಗ್ಸಿದ್ರು. ಸೊಸೇನೂ ಮನೆ ತುಂಬಿಸಿಕೊಂಡ್ರು. ಆಮೇಲೆ ಯಾರಿಂದ್ಲೋ ಗೊತ್ತಾಗಿತ್ತು - ಬಹುಶಃ ರವಿಯಿಂದಾನೇ ಇರಬೇಕು - 'ಕೂಸಿ'ನ ಮಾವ ಮದ್ವೆ ಮುಗಿದ ಮಾರನೇ ದಿನಾನೇ ಮುಂದಿನ ಬೀದಿ ಮಂಜುನಾಥನಿಗೆ ನೂರೆಂಟು - ಉಹೂ ನೂರೊಂಭತ್ತು ಇಡಿಗಾಯಿ ಒಡೆದರಂತೆ - ಅಂದ್ರೆ, ಮಗಳನ್ನ ನೋಡೋಕ್ಕೆ ಬಂದಿದ್ದ ಒಂದೊಂದು ಗಂಡಿನ ಹೆಸರಿನಲ್ಲಿ ಒಂದೊಂದು ಇಡಗಾಯಂತೆ. ಅಂದ್ರೆ ನೂರ ಒಂಭತ್ತನೇ ಗಂಡು ನಮ್ಮ ಕೂಸು ಅಂದಹಾಗಾಯ್ತು.

ಡೆಲ್ಲಿನಲ್ಲಿ ಎಲ್ಲಾ ಸುಸೂತ್ರವಾಗೇ ನಡೀತಾಯಿತ್ತು. ಅಬ್ಬಕ್ಕ ಯಥಾಪ್ರಕಾರದಂಥೆ ಅಡಿಗೆ ಮನೆ charge ಮನೆ ಛಾರ್ಜು ಎಲ್ಲಾ ವಹಿಸಿಕೊಂಡ್ರು. ಸೊಸೆ ತನ್ನ ಮುಖದ ಬಣ್ಣ, ತುಟಿ ಬಣ್ಣ, ಉಗುರು ಬಣ್ಣ ಇತ್ಯಾದಿಗಳನ್ನ ನೋಡ್ಕೊಳ್ಳೊದಕ್ಕೆ ಶುರು ಮಾಡ್ತು. ಅಬ್ಬಕ್ಕಂಗೆ ಅದೂ ಒಂದು ತರಹ ಇಷ್ಟಾನೇ ಆಗ್ತಿತ್ತು ಅನ್ನಿ. ಅವಳಿಗೆ ಜಿಹ್ವಾ ಚಾಪಲ್ಯ ಎಲ್ಲರ್ಗಿಗಿಂತಾ ಸ್ವಲ್ಪ ಜಾಸ್ತಿ ಅನ್ಬೇಕು. ಅದರಲ್ಲೂ ಸೌತೆಕಾಯಿ ಕೋಸಂಬ್ರಿ ಅವರ ಫೇವ್ರಿಟ್ಟು. ಹಬ್ಬ ಹರಿದಿನಾಂತ ಕೋಸಂಬ್ರಿ ಮಾಡ್ಕೊಂಡು ಬೋಗುಣಿ ಭರ್ತಿ ನೇವೇದ್ಯಕ್ಕೆ ಇಟ್ಟಿದ್ದೇಂತ್ಹೇಳಿ ತಾನೊಬ್ಬಳೇ ಭಕ್ಷಿಸಿ ಬಿಡೋಳು. ಇಷ್ಟು ದಿನ ಕೋಸಂಬ್ರಿ ತಿನ್ನದೆ ಬಾಯಿ ಕೆಟ್ಟು ಹೋದ ಹಾಗೆ ಆಗಿತ್ತು ಅವತ್ತಂತೂ ಕೋಸಂಬ್ರಿ ತಿನ್ನಲೇಬೇಕು ಇಲ್ಲದೇ ಇದ್ರೆ ಏನು ಅನರ್ಥ ಆಗ್ಬಿಡುತ್ತೋ ಅನ್ನೊ ಭಯ ಶುರುವಾಗ್ಹೋಯ್ತು ಅಬ್ಬಕ್ಕಂಗೆ. ಸೊಸೆ ಭಾಷಾಜ್ಞಾನ ಎಷ್ಟು ಇರಬಹುದು ಅನ್ನೊ ಅರಿವು ಈವರೆಗಿನ ಕೆಲವು ನಿದರ್ಶನಗಳಿಂದ ತಿಳಿದೂ ಇತ್ತು. ಸುಳ್ಳು ಹೇಳಿ ಮದುವೆ ಮಾಡಿಸಿದ ಬೀಗನ ಮೇಲೆ

ಕೆಲವು ಬಾರಿ ಕೋಪವೂ ಬರುತ್ತಿತ್ತು. ಆದ್ರೂ ಒಂದು ಕೈ ನೋಡೇ ಬಿಡೋಣ ಅಂತ ಸೊಸೇಗೆ "ಮಗೂ! ಮಾರ್ಕೆಟ್ಟಿಗೆ ಹೋಗಿ ಒಂದಿಷ್ಟು ಸೌತೆಕಾಯಿ ತರ್‍ತೀಯಾ!" ಅಂದ್ರು. ಸೊಸೇನೂ ಸಂತೋಷವಾಗಿ ಹೊರಟಳು. ವಾಪಸ್ಸು ಬಂದೋಳೇ ಜಂಭದಿಂದ ಒಂದು ಪೊಟ್ಟಣ ತಂದು ಅತ್ತೇ ಕೈಲಿ ಕೊಟ್ಟಳು. ಇದುವರೆಗೂ ಬಾಗಿಲಲ್ಲೇ ಕಾಯ್ತಾ ನಿಂತಿದ್ದ ಅಬ್ಬಕ್ಕ ಥಂಗಂತೆ ಹಾರಿ ಆ ಪೊಟ್ಟಣವನ್ನು ದೇವರ ಪ್ರಸಾದದಂತೆ ಸ್ವೀಕರಿಸಿ ಕಣ್ಣಿಗೆ ಒತ್ತಿಕೊಂಡು ಬಿಚ್ಚಿದರು. ಅದರಲ್ಲಿ ಇದ್ದದ್ದೇನು? ರಕ್ತದಿಂದ ಜಿನಗುಡುತ್ತಿರುವ ಮಾಂಸದ ತುಂಡುಗಳು ಒಳಗಿದ್ದ ಕವರಿನಲ್ಲಿ ನಗುತ್ತಾ ಮಲಗಿದ್ದವು. ಸೊಸೆ 'ಕೀರಾ' (ಸೌತೆಕಾಯಿ) ಅನ್ನೋ ಬದಲು 'ಕೀಮಾ' (ತುಂಡರಿಸಿದ ಮಾಂಸ) ಅಂದುಕೊಂಡು ತಂದಿದ್ದಳು.

ಮೂರ್ಛೆ ಹೋದ ಅಬ್ಬಕ್ಕನ್ನ ಎಚ್ಚರಿಸಬೇಕಾದ್ರೆ ಕೂಸಿಗೆ ಸಾಕ್ಸಾಗ್ಹೋಯ್ತಂತೆ. ಆರು ತಿಂಗಳಿಗೆ ಅಂತ ಹೋದ ಅಬ್ಬಕ್ಕ 'ಇನ್ನೆಂದೂ ಆ ದಿಕ್ಕಿನಲ್ಲಿ ತಲೇನೂ ಇಟ್ಟು ಮಲಗೋಲ್ಲ' ಅಂತ ತಿಂಗಳೊಪ್ಪತ್ತಿಗೇ ವಾಪಸ್ಸಾದಾಗ ಎಲ್ಲರಿಗೂ ಆಶ್ಚರ್ಯ. 'ಪಾಪ! ಅದು ಅರೀದೆ ಅಭಾಸ ಮಾಡ್ಬಿಡ್ತು'! ಅಂತ ಸೊಸೇನ ವಹಿಸಿಕೊಂಡು ಅಂದಾಗ್ಲಂತೂ ನಮ್ಮಮ್ಮಂಗೆ ಸಿಡಿ ಸಿಡಿ ಕೋಪ ಬಂದಿದ್ದಲ್ಲದೆ ಕೊಂಚ ಪೆಚ್ಚೂ ಆದ್ರು. ಯಾಕಂದರೆ ನಮ್ಮಮ್ಮ ಅತ್ತೆ ಸೊಸೆಯರಲ್ಲಿ ಭಿನ್ನಾಭಿಪ್ರಾಯ ಇಲ್ದೇ ಇದ್ರೆ ಅದೂ ಒಂದು ಸಂಸಾರವೇ ಅನ್ನೋ ಜಾತಿಗೆ ಸೇರಿದೋಳು. ಸೊಸೇನ ಬಯ್ಯೋದಕ್ಕೆ ಶುರು ಹಚ್ಕೊಬೇಕೊಂತ ಇದ್ದ ನಮ್ಮಮ್ಮ "ಹಾಳಾಗಿ ಹೋಗು! ನಿನ್ನ ಹಣೆಬರಹ ಇಷ್ಟೇ" ಅಂತ ಸುಮ್ಮನಾದ್ರು.

ಈ ಅಭಾಸವಾಗಿ ಅಬ್ಬಕ್ಕ ವಾಪಸ್ಸು ಹೊರಟ್ಮೇಲಂತೂ ಸೊಸೆಗೂ ಪೆಚ್ಚಾಗ್ಬಿಟ್ಟಿತ್ತು. ಮನೆ ಕೆಲ್ಸದ ಭಾರಾನೂ ತನ್ನ ಮೇಲೆ ಬಿತ್ತಲ್ಲಾ ಅನ್ನೋ ದುಃಖ ಬೇರೆ. ಹೇಗಾದ್ರೂ ಭಾಷೆ ಕಲ್ತೇ ಕಲೀತೀನಿ ಅನ್ನೋ ಪಣ ತೊಟ್ಟು. ಗಂಡ ಕುಳಿತಾಗ ನಿಂತಾಗ ಹಿಂದಿ ಕ್ಲಾಸಿಗೆ ಸೇರಿಸು ಅಂತ ಪೀಡಿಸ ಹತ್ತಿದಳು. ಅವಳದ್ದು ಒಂದೇ ಜಪ ದಿನ ಬೆಳಗಾದ್ರೆ "ಕೂಸೂ!" (ಅತ್ತೆ ಕರೀತಿದ್ದ ಹಾಗೇ ಗಂಡನ್ನ ಕರಿಯೋ ಅಭ್ಯಾಸ ಮಾಡಿಕೊಂಡಿದ್ಲು) ನಾನು ಹಿಂದೀ ಕಲೀಬೇಕು. ಕ್ಲಾಸಿಗೆ ಸೇರ್‍ಸು! ಅಲ್ಲಿ ಎಂತೆಂತಹ ಜನಬರ್‍ತಾರೆ ಗೊತ್ತೆ? ಒಬ್ಬರಿಗಿಂತ ಒಬ್ಬರು ರಿಚ್, ಒಳ್ಳೇ ಸಿನೆಮಾ ಸ್ಟಾರ್ಸ್ ತರಹ ಅಲಂಕಾರ ಮಾಡ್ಕೊಂಡು ಬರ್‍ತಾರೆ? ನೀನು ಸೇರಿಸದೆ ಇದ್ರೆ ನಾನು ನಮ್ಮಪ್ಪನ ಮನೆಗೆ ಹೋಗ್ತೀನಿ"! ಅಂತ ದಿನಾ ಹೆದರಿಸೋಳು.


ಕೂಸಿಗೆ ಅವಳನ್ನ ಸೇರಿಸಬಾರದು ಎಂದೇನೂ ಇಲ್ಲ! ರವಿ ಎಚ್ಚರಿಕೆ ಕೊಟ್ಟಿದ್ದನಲ್ಲ ಪ್ಯಾರಚ್ಯೂಟಿನಿಂದ ಎಸದ್ರೆ ಇವಳು ತಲೆ ಮೇಲೇ ಬಂದು ನಿಲ್ಲೋದೂಂತ ಅದು ಇತ್ತೀಚೆಗೆ ನಿಜಾಂತ ಅನ್ನಿಸಿ ಅವಳನ್ನ ಓದೋಕೆ ಸೇರಿಸ್ಬೇಕೊಂದ್ರೆ ಮನಸ್ಸು ಯಾಕೋ ಹಿಂಜರಿಯೋದಂತೆ.

ದಿನದ ಅಡಿಗೆ ತಿಂಡೀನೂ ಮಾಡದೆ ಸೊಸೆ ಸೀರೆ ಬೀರು ಮುಂದೆ ಕುಳಿತು ಸೋಮವಾರಕ್ಕೆ ಈ ಸೀರೆ, ಮಂಗಳವಾರಕ್ಕೆ ಈ ಸೀರೆ, ಈ ಒಡವೆ - ಬುಧುವಾರಕ್ಕೆ ಇದು ಅಂತೆಲ್ಲಾ ಅಂದವಾಗಿ ಜೋಡ್ಸಿ ಒಳಗಿಡೋದು ಮತ್ತು ಹೊರಗೆ ತೆಗೆಯೋದು - ಇದೇ ಕೆಲಸ ಮಾಡ್ತಿದ್ಲಂತೆ. ಆದ್ರೂ ಕೊನೆಗೆ ಪ್ರೀತಿಯ ಹೊಸ ಹೆಂಡ್ತಿ ಆಸೆಗೆ ತಲೆಬಾಗಿ ಅವಳನ್ನ ಕ್ಲಾಸಿಗೆ ಸೇರ್ಸೇ ಬಿಟ್ಟ. ದಿನಾ ಹಿಂದಿ ಪಾಠದಿಂದ ಮನೆಗೆ ಬಂದ ಸೊಸೆ ಪಾಠ ಓದೋದು ಬಿಟ್ಟು ಆವರ ಸೀರೆ ಹೀಗಿತ್ತು - ಆವಳ ಚೂಡಿದಾರ ಹಾಗಿತ್ತು ಅಂತೆಲ್ಲಾ ವರ್ಣಿಸ್ತಾ ಕಾಲ ಕಳೀತಾ ಕೂತರೆ ಕೂಸಿಗೆ ತಾನು ಅವಳನ್ನ ಈ ಹವ್ಯಾಸಕ್ಕೆ ಬಿಡಲೇಬಾರದಾಗಿತ್ತು ಅಂತ ಪೇಚಾಡೋ ಪರಿಸ್ಥಿತಿ ಬಂದಿತ್ತಂತೆ. ಅಡಿಗೆ ಕೆಲಸ ಎಲ್ಲಾ ಪಾಪ! ಇವನ ತಲೆ ಮೇಲೆ ಬಿದ್ದುಬಿಟ್ಟಿತ್ತಂತೆ. ಕೂಸಿನ ಪ್ರಕಾರ ಆವಳ ಅಲಂಕಾರದ ವಸ್ತುಗಳಿಗಾಗಿ ತನ್ನ ತಿಂಗಳ ಸಂಬಳಕ್ಕಿಂತ ಜಾಸ್ತಿ ಹಣ ಖರ್ಚಾಗೋ ಸ್ಥಿತಿಗೆ ಬಂದ್ಬಿಟ್ಟಿತ್ತಂತೆ. ಅವಳ ಭಾಷಾಜ್ಞಾನ ಮಾತ್ರ ಇಷ್ಕ್, ಮುಹೋಬತ್, ಪ್ಯಾರ್‌ಗಿಂತ ಮುಂದುವರೀತೋ ಇಲ್ಲವೋ ಅನ್ನೋದೇ ಅನುಮಾನ. ಇನ್ನೇನಿಲ್ಲಾ ಅಂದ್ರೂ, ದಿನಾ ತರಕಾರಿ ಹಣ್ಣುಗಳ ಹೆಸರನ್ನೆಲ್ಲಾ ಉರು ಹೊಡೆಯೋದು ಮಾತ್ರ ಅವನ ಕಿವೀಗೆ ಬೀಳ್ತಾಯಿತ್ತಂತೆ.

ಇದ್ದಕ್ಕಿದ್ದ ಹಾಗೆ ಸೊಸೇಗೆ ತನ್ನ ಅತ್ತೇನ ಕರಸ್ಕೋಬೇಕು ಮತ್ತು ತನ್ನ ಪಾಂಡಿತ್ಯನ ಅವರ ಮುಂದೆ ಪ್ರದರ್ಶಿಸ್ಬೇಕು ಅನ್ನೊ ಹುಚ್ಚು ಶುರುವಾಯ್ತು. ಕೂಸಿನ ಮುಂದೆ ತನ್ನ ಆಸೆ ತೋಡ್ಕೊಂಡ್ಲು. ಪಾಪ! ಕೂಸಿಗೂ ಅಷ್ಟೆ ತನ್ನ ಅಮ್ಮನ್ನ ನೋಡ್ಬೇಕು! ಅವ್ರ ಜೊತೆ ಇರ್ಬೇಕು! ಅವ್ರು ಮಾಡಿದ ರುಚಿ ರುಚಿಯಾದ ಊಟ ಮಾಡ್ಬೇಕು ಅನ್ನೋ ಆಸೆ ಪ್ರಬಲವಾಯ್ತು! ಸರಿ! ಅಬ್ಬಕ್ಕನೂ - ಡೆಲ್ಲಿ ಕಡೆ ತಲೆ ಇಟ್ಟು ಮಲಗೋದಿಲ್ಲ ಅಂತ ಶಪಥ ಮಾಡಿದ್ದೋರು ಶಪಥ ಮುರಿದು ಬಂದೇಬಿಟ್ರು. ಅಬ್ಬಕ್ಕ ಸಂತೋಷವಾಗೇ ಇರ್ತಿದ್ರು. ಸೊಸೆ ಮಾತ್ರ ಸ್ವಲ್ಪ ಪೆಚ್ಚಾದಂತೆ ಇದ್ಲು. ಯಾಕೇಂದ್ರೆ ಅವರು ಅವಳ ಪಾಂಡಿತ್ಯವನ್ನ ಪರೀಕ್ಷಿಸೋ ತಂಟೆಗೆ ಹೋಗಿರಲಿಲ್ಲ - ಅವಳು ಏನಾದ್ರು ಅಭಾಸ ಮಾಡ್ಬಿಟ್ಟಾಳು ಅನ್ನೊ ಭಯಕ್ಕೆ. ಆದ್ರೂ ಎಷ್ಟು ದಿನ ತಾನೇ ಅವರ ನಾಲಗೆ ಸುಮ್ಮನೆ ಇದ್ದೀತು. ಈಗ ಅದು ಅವರನ್ನ ಹೀರೆಕಾಯಿ ಬೋಂಡ ತಿನ್ಸು ಅಂತ ಪೀಡ್ಸೊದಕ್ಕೆ ಶುರು ಹಚ್ಚಿತ್ತು. ಕೂತರೆ, ನಿಂತರೆ ಇತ್ತೀಚೆಗಂತೂ ಮಲಗಿದಾಗ ಕೂಡ ಗುಂಡ ಗುಂಡನೆಯ ಬಿಸಿ ಬಿಸಿ ಬೋಂಡ ಕುಣಿಯೋವಂತೆ. ತಡೀಲಾರ್ದೆ ಸೊಸೆ ಮುಂದೆ ತಮ್ಮಾಸೆ ತೋಡ್ಕೊಂಡೇ ಬಿಟ್ರು. ಸೊಸೇಗೂ ತನ್ನ ಜಾಣತನ ಪ್ರದರ್ಶಿಸೋ ಕಾಲ ಬಂತಲ್ಲಾ ಅಂತ ತುಂಬಾ ಸಂತೋಷವಾಗ್ಹೋಯ್ತು. ತಕ್ಷಣ ಸಿಂಗಾರ ಮಾಡ್ಕೊಂಡು - ಕೊನೆ ಬಾರಿಯೊಮ್ಮೆ ಕನ್ನಡೀಲಿ ಮುಖ ನೋಡ್ಕೊಂಡು ಮುಂಗುರುಳು ತೊದ್ಗೊಂಡು note book ಅದೇ ತಾನು ಬರ್ಕೊಂಡಿದ್ದಲ್ಲಾ ಎಲ್ಲಾ ತರಕಾರಿಗಳ ಹೆಸರನ್ನೂ ತೆಗೆದು ಒಂದ್ಸೆಸತಿ ಜೀಂಗಾ (ಹೀರೆಕಾಯಿ) ಅಂತ ಹೇಳ್ಕೊಂಡು ಹೊರಟಳು. ಅದೇ ಹೊತ್ತಿಗೆ ಪಕ್ಕದ ಮನೆಯಾಕಿ -

ತಿಲೋತ್ತಮ ಮಜುಮದಾರ ಅಬ್ಬಕ್ಕನ್ನ ನೋಡೋದಕ್ಕೆ ಬಂದ್ಲು. ಆಕೆಗೆ ಕೊಂಚ ಮಟ್ಟಿಗೆ ಕನ್ನಡದ ಜ್ಞಾನ ಇತ್ತು. ಹಾಗೇ ಬೆಂಗಾಲಿ ಮಿಶ್ರಿತ ಕನ್ನಡದಲ್ಲಿ ಅದೂ ಇದೂ ಮಾತಾಡ್ತಾಯಿದ್ದಿದ್ದೂ ಉಂಟು.

''ಏನಾಂಟಿ! ಜೀಂಗಾ ತರೋದಕ್ಕೆ ಹೊರಟ್ರು, ಸೊಸೆ. ನಮ್ಮ ಬಂಗ್ಲಾ ಭಾಷೇಲಿ ಜೀಂಗಾ ಅಂದ್ರೆ ಪ್ರಾನ್ - ಒಂದು ತರಹ ಮೀನಿನ ಜಾತಿಗೆ ಸೇರಿದ್ದು ಅದು - ಜೀಮಗ ಮಾಶ್ ಅಂತೀವಿ ಅಂದ್ಲು. ತಿಲೋತ್ತಮ ಹಾಗಂದಿದ್ದನ್ನ ಕೇಳಿಸ್ಕೊಂಡಿದ್ದೇ ತಡ ಅಬ್ಬಕ್ಕ ಧಡಾರ ಅಂತ ಜ್ಞಾನತಪ್ಪಿ ಕೆಳಗೆ ಉರಳಿ ಬಿದ್ದುಬಿಟ್ರು. ಅವರ ಕಣ್ಣು ಮುಂದೆ ನಲಿತಾ ಕುಣಿತಾ ಗುಂಡ ಗುಂಡಗೆ ಸುತ್ತುತ್ತಾ ಇದ್ದ ಹೀರೇಕಾಯಿ ಬೋಂಡಗಳು ಈವಾಗ ಮೀನು, ಮೊಸಳೆ, ಏಡಿಗಳ ರೂಪ ಹೊತ್ತು ಮನೇಲೆಲ್ಲಾ ಹರೀತಾಯಿದ್ವು. ಪಾಪ! ತಿಲೋತ್ತಮ ಮುಜಮದಾರ ತಾನೇನು ತಪ್ಪಿನ ಮಾತಂದೆ ಅಂತ ಅರ್ಥವಾಗದೇ ಕಣ್ಣೀರು ಹಾಕ್ತಾ ಗಾಬರಿಯಾಗಿ ನಿಂತಿದ್ಲು.



''ನೀನೇ ಹೇಳಿದ್ಯಲ್ಲಮ್ಮಾ, ಹೊರಗಡೆ ಆಡ್ಕೊಳ್ಳಿ ಅಂತಾ''

ಓ ಮನಸೇ...

- ಎಚ್. ಗೋಪಾಲಕೃಷ್ಣ

ಮನಸ್ಸನ್ನು ಯಾವಾಗಲೂ ನಮ್ಮ ಹತೋಟಿಯಲ್ಲೇ ಇರಿಸಿಕೊಂಡರೆ ನಮ್ಮ ಮನಃಕ್ಷೋಭೆಗಳು ನೂರಕ್ಕೆ ಇನ್ನೂರರಷ್ಟು ದೂರವಾಗುತ್ತದೆ ಅಂತ ಮೊನ್ನೆ ನಮ್ಮ ಫ್ಯಾಕ್ಟರೀಗೆ ಬಂದಿದ್ದ ಮ್ಯಾನೇಜುಮೆಂಟು ಗುರು ಒಬ್ಬರು ಮೂರು ದಿವಸ ಮನಸ್ಸನ್ನು ಕಂಟ್ರೋಲಿಸುವುದು ಹೇಗೇ ಎಂಬ ವಿಷಯ ಕುರಿತ ತರಬೇತಿ ಕ್ಲಾಸುಗಳ ನಡುವೆ ಹೇಳಿದ್ದರು. ತುಂಬಾ ಚೆನ್ನಾಗಿ ನಡೀತಿರೋ ಫ್ಯಾಕ್ಟರಿ, ಕೈ ತುಂಬಾ ಸಂಬಳ, ಆರು ತಿಂಗಳಿಗೆ ಒಂದು ಸಲ ಪ್ರಪಂಚ ಸುತ್ತೋ ಅವಕಾಶ, ಅದರ ಜೊತೆಗೆ ಈ ರೀತಿಯ ನಮ್ಮ ಮನಸ್ಸನ್ನು ನಾವೆ ಕಂಟ್ರೋಲಿಸುವ ಮತ್ತು ಅದರ ಮೂಲಕ ಕಾರ್ಖಾನೆಯ ಉತ್ಪತ್ತಿಯನ್ನು ಆಕಾಶಕ್ಕೆ ಏರಿಸುವ ಹಲವಾರು ಪ್ರಯೋಗಗಳು ನಮ್ಮಲ್ಲಿ ಆವಾಗವಾಗ ತುಂಬಾ ಚೆನ್ನಾಗಿ ನಡೀತದೆ. ಈ ರೀತಿಯ ಕಾರ್ಯಕ್ರಮಗಳನ್ನು ಅರೇಂಜಿಸೋದಕ್ಕೆ ಅಂತಲೇ ಒಂದು ಡಿಪಾರ್ಟ್‌ಮೆಂಟನ್ನು ನಮ್ಮ ಹೆಡ್ಡು ಮಾಡಿದ್ದಾನೆ: ಇವರು ಅಂದರೆ ಈ ಡಿಪಾರ್ಟ್‌ಮೆಂಟಿನವರು ಪ್ರತಿದಿನ ಎಲ್ಲೆಲ್ಲಿ ಭಾಷಣ ಗೀಷಣ ಅಂತಿರುತ್ತೋ ಅಂತ ಕಡೆ ಹೋಗಿ ಕೂತ್ಕೊಂಡು ಭಾಷಣ ಕೇಳಿಕೊಂಡು ಬರ್ತಾರೆ, ಭಾಷಣಾನ ಚೆನ್ನಾಗಿ ಮಾಡಿದವರನ್ನ ಆಗಲೇ ಬುಕ್ಕೂ ಮಾಡಿ ಅವರ ಸಮಯ ಹೊಂದಿಸಿಕೊಂಡು ನಮ್ಮಲ್ಲೂ ನಮ್ಮನ್ನ ತರಬೇತಿಗೊಳಿಸುತ್ತಾರೆ! ಈ ಎಂ.ಎನ್.ಸೀಗಳು ನಮ್ಮ ದೇಶಕ್ಕೆ ಲಗ್ಗೆ ಹಾಕಿ ನಮ್ಮನ್ನೆಲ್ಲಾ ಅಲ್ಲಾಡಿಸಿದವು ನೋಡಿ ಅವಾಗಿಂದ ಮೆಟ್ಟಿಕೊಂಡಿರೋ ಹೊಸಾ ಭೂತ ಈ ತರಬೇತಿ ತರಗತಿಗಳು! (ಇದು ನಮ್ಮಲ್ಲೇ ಇರಲಿ, ಇದನ್ನ ನಾನು ಘಟ್ಟಿಯಾಗಿ ಹೇಳಿದರೆ ನನ್ನ ಕೆಲಸದ ಬಾಯಿಗೆ ಮಣ್ಣು ಬೀಳೋದೂ ಅಲ್ಲದೆ ಆರು ತಿಂಗಳಿಗೆ ಒಮ್ಮೆಯ ಫಾರಿನ್ ಟ್ರಿಪ್ಪು ತೋಪಡ ಆಗಿಬಿಡುತ್ತೆ)

ಕಳೆದ ವಾರ ತಾನೆ ಇಂಥಹ ಒಂದು ಕ್ಲಾಸಿಗೆ ಹೋಗಿ ಮನಸ್ಸನ್ನು ನಿಯಂತ್ರಿಸುವದರ ಬಗ್ಗೆ ಸಂಪೂರ್ಣ ತರಬೇತಿ ಪಡೆದಿದ್ದೆ. ಇಡೀ ಪ್ರಪಂಚದ ಸಮಸ್ಯೆಗಳು ಇರೋದೆ ನಮ್ಮ ಮನಸ್ಸನ್ನು ನಾವು ಸರಿಯಾಗಿ ನಿಯಂತ್ರಣದಲ್ಲಿ ಇಟ್ಟುಕೊಳ್ಳದಿರುವುದರಿಂದ ಅನ್ನೋದನ್ನ ಆ ಗುರು ಬಹಳಾ ಚೆನ್ನಾಗಿ ಮನಸ್ಸಿಗೆ ನಾಟುವ ರೀತಿಯಲ್ಲಿ ವಿವರಿಸಿ ವಿವರಿಸಿ ಹೇಳಿದ್ರೂ, ಅಲ್ಲದೇ ಎಲ್ಲರೂ ಈ ನಮ್ಮ ರೀತಿ ವಿಧಾನಗಳನ್ನ ಅನುಕರಿಸಿಬಿಟ್ಟರೆ ಜಗತ್ತು ಸಂಪೂರ್ಣವಾಗಿ ಸಮಸ್ಯೆಗಳಿಂದ ಮುಕ್ತಿ ಪಡೆದುಬಿಡುತ್ತೆ. ನಿಮ್ಮನ್ನ ನೀವು ಮೊದಲು ಗೆಲ್ಲಿ ಕೋಪ ಮಾಡಿಕೊಳ್ಳುವ ಮೊದಲು ಕೋಪ ಯಾಕೆ ಮಾಡಿಕೋಬೇಕು ಅಂತ ಒಂದೇ ಒಂದು ಸಲ ತಲೇಲಿ ಚಿಂತಿಸಿ, ಆಗ ನಿಮಗೆ ಭಗವಂತ ದಾರಿ ತೋರಿಸುತ್ತಾನೆ: ಇಡೀ ಪ್ರಪಂಚವನ್ನು ಸರಿ ಮಾಡುತ್ತೇನೆ ಎನ್ನುವುದರ ಬದಲಿಗೆ ನಿಮ್ಮನ್ನ ನೀವು

ಸರಿಪಡಿಸಿಕೊಂಡರೆ ಇಡೀ ವಿಶ್ವ ಸರಿಹೋದ ಹಾಗೆಯೆ... ನಮ್ಮ ಚಿಂತೆಗಳು ಶುರು ಆಗೋದೇ ಇತರರ ಬಳಿ ಇರುವುದು ನಮ್ಮ ಬಳಿ ಎಲ್ಲ ಎಂಬ ಯೋಚನೆಯಿಂದ. ನಿಮ್ಮ ಬಳಿ ಏನಿದೆ ಅದು ಇತರರ ಬಳಿಯಲ್ಲಿ ಇಲ್ಲ ಅಂತ ನೀವು ಎಂದೂ ಅರ್ಥ ಮಾಡಿಕೊಳ್ಳಲು ಪ್ರಯತ್ನವನ್ನೇ ಪಡುವುದಿಲ್ಲ. ಒಂದೆ ಒಂದು ಸಲ ನೀವು ಈ ಪ್ರಯತ್ನ ಪಡಿ ಆಗ ಜಗತ್ತು ನಿಮಗೆ ಸಮಸ್ಯೆಗಳ ಸರಮಾಲೆ ಅಂತ ಅನಿಸುವುದೇ ಇಲ್ಲ... ಈ ಧಾಟಿಯಲ್ಲಿ ಮ್ಯಾನೇಜ್‌ಮೆಂಟಿನ ಗುರು ಮೂರು ದಿವಸ ಲೆಕ್ಚರು ಬಾಯರಿಸಿಬಿಟ್ಟಿ ನಮ್ಮನ್ನ ಹೊಸಾ ಲೋಕಕ್ಕೆ ತಗೊಂಡು ಹೋಗಿಯಾಗಿತ್ತು!

ಸರಿ ಇಂಥ ತರಗತಿಗಳಿಗೆ ಹೋಗಿ ಬಂದ ನಂತರ ಅದೇನಾಗಬೇಕೋ ಅದೇ ನಮಗೂ ಆಗಿದ್ದು!

ಸಬಾರ್ಡಿನೇಟುಗಳ ಮೇಲೆ ಕೋಪ ಕಮ್ಮಿಯಾಗಿತ್ತು. ಆಡಳಿತ ವರ್ಗ ಹೇಳಿದ ಕೆಲಸಗಳನ್ನು ಕಮಕ್ ಗಿಮಕ್ ಅನ್ನದೇಲೇನೆ ಕುರಿ ಥರಹ ತಲೆಬಗ್ಗಿಸಿ ಪಾಲಿಸೋದು ಕಲೀತಿದ್ದೆವಿ. ಅದಕ್ಕಿಂತಲೂ ಹೆಚ್ಚಾಗಿ ಮನೆಯಲ್ಲಿ ಹೆಂಡತಿ ಸಂಗಡ ಜಗಳ, ಮನೆಗೆ ಗ್ಯಾಸ್ ತಂದು ಇಡುವವನ ಹತ್ತಿರ ಎರಡು ರಪಾಯಿ ಜ್ಯಾಸ್ತಿ ಕೇಳಿದ ಅಂತ ಆಡುತ್ತಿದ್ದ ಜಗಳ, ಮನೆ ಮುಂದೆ ಸೊಪ್ಪು ಮಾಡುವವಳ ಬಳಿ ನಡೆಸುತ್ತಿದ್ದ ನಾಲ್ಕಾಣೆಗಾಗಿನ ಚೌಕಾಸಿ... ಮೊದಲಾದ ಜೀವನದ ಅವಶ್ಯ ಅವಿಭಾಜ್ಯ ಅಂಗಗಳು ಈಗ ನಮ್ಮ ಪ್ರಾಮುಖ್ಯತೆ ಕಳೆದುಕೊಂಡು ಜೀವನ ಏನೂ ಏರುಪೇರುಗಳೇ ಇಲ್ಲದೆ ನಡೀತಿತ್ತು.

ಇದರಿಂದ ಯಾರಿಗೆ ಹೆಚ್ಚು ತೊಂದರೆ ಆಗಿದ್ದು ಅಂದರೆ ನನ್ನವಳಿಗೆ. ಯಾವಾಗಲೂ ಮಾತೇ ಆಡದೆ ಮೂಕಬಸವನ ಹಾಗೆ ಬಾಯಿ ಅದುಮಿಕೊಂಡು ಕುಕ್ಕರಿಸಿರ್ತೀರಲ್ಲಾ ನಿಮಗೆ ಯಾವ ದೆವ್ವ ಬಡಿದುಕೊಂಡಿದೆ? ಅಂತ ಒಂದೆರಡು ಸಲ ಮಾತಿಗೆ ಎಳೆದವಳು ನನ್ನನ್ನ ಕಾಲು ಕೆದರಿ ಜಗಳಕ್ಕೆ ಎಬ್ಬಿಸೋದರಲ್ಲಿ ಫೇಲು ಆಗಿಬಿಟ್ಟಳು! ನಿಮಗೆ ಅದೇನಾಗಿದೇರೀ ಅಂತ ಮೊನ್ನೆ ಕಣ್ಣಿನಲ್ಲಿ ನೀರು ಸುರಿಸುತ್ತಾ ಅವಳು ಕೇಳಿದಾಗ ನನಗೂ ಸಹ ನೀರು ಬರೋದು ಒಂದು ಬಾಕಿ. ಏನೂ ಆಗಿಲ್ಲವೇ ಮಾರಾಯ್ತೀ ಈತರ ನಮ್ಮ ಆಫೀಸಿನಲ್ಲಿ ಮ್ಯಾನೇಜುಮೆಂಟು ಕ್ಲಾಸು ಒಂದು ನಡೀತು, ಅಲ್ಲಿ ಕೋಪ ಕೂಡದು ಅಂತ ಹೇಳಿದಾರೆ ಅಂತ ಹೇಗೆ ಹೇಳಲಿ? ನಂಗೇನಾಗಿದ್ಯೇ ರುಬ್ಬುಗುಂಡು ಇದ್ದ ಹಾಗಿದ್ದೀನಲ್ಲಾ ಅಂತ ಮಾತು ಹಾರಿಸಿದೆ.

ಅವಳ ಬಲವಂತಕ್ಕೆ ಕಟ್ಟು ಬಿದ್ದು ಆಚೆ ಹೊರಟೆವು.

ನಮ್ಮ ಮನೆಯಿಂದ ಮೂವತ್ತು ಮೈಲಿ ದೂರದ ಅವಳ ರಿಲೇಷನ್ನುಗಳ ಮನೇಗೆ ಹೋದೆವು. ಅಲ್ಲಿಂದ ಹೊರಟಾಗ ಸರಿ ರಾತ್ರಿ ಆಗಿತ್ತು. ರಿಕ್ಷಾದವರು ವರದಿಲ್ಲೆ ಚಾರ್ ಅಂತ ಕೈ ಆಡಿಸಿದರು ಅಂತ ಬಿ.ಎಂ.ಟಿ.ಸಿ. ಕಾದು ನಿಂತೆವು. ಬಸ್ಸೂ ಬಂತು ಒಂದೇ

ರಷ್ಟು, ಅದು ಹೇಗೋ ಒಳಗೆ ತೂರಿದೆ. ಯಾರದ್ದೋ ಪಕ್ಕ ನಿಂತೆ. ಮುಂದಿನ ಸ್ಟಾಪಿನಲ್ಲಿ ಬಸ್ಸು ನಿಂತಾಗ ಪಕ್ಕದ ಸೀಟಿನವನು ಇಳಿಯಲು ಮೇಲೆದ್ದ. ಅವನ ಪಕ್ಕ ಕೂತವನು ಆ ಜಾಗ ಹಿಡಿದುಕೊಂಡು ಆ ಸ್ಟಾಪ್‌ನಲ್ಲೇ ಹತ್ತಿದ ಯಾರನ್ನೋ ಇಂಗೆವಾ... ಅಂತ ಕರೆದ. ಈ ಜಾಗದಲ್ಲಿ ನಾನು ಕೂರಬೇಕಿತ್ತಲ್ಲಾ ಅಂತ ನನ್ನ ಮನಸ್ಸು ಹೇಳಿತು. ಪಾಪ ಆತ ಕೂರಲಿ, ಅದರಿಂದ ನನಗೇನು ಹೋಯಿತು ಹಾಗೆ ನೋಡಿದರೆ ನಾನು ಫ್ಯಾಕ್ಟರೀಲಿ ಆರು ಘಂಟೆ ಕೂತಿರೋನಲ್ಲವೇ... ಅಂತ ಸಮಾಧಾನ ಪಡಿಸಿತು, ಮನಸ್ಸು. ಹೌದಲ್ಲವೇ ಪಾಪ ಆತ ಅವನು ಕೆಲಸ ಮಾಡೋಕಡೆ ಕೂತಿರ್ತಾನೋ ಇಲ್ಲವೋ... ಅಂತ ಸಂಬಾಳಿಸಿಕೊಂಡೆ.

ಬಸ್ಸಲ್ಲಿ ರಷ್ಟು ಜಾಸ್ತಿ ಆಯಿತು. ಪಕ್ಕದ ಸೀಟಿನಲ್ಲಿ ಕೂತಿದ್ದವನು ಏಳೋ ಸೂಚನೆ ಕಾಣಿಸಿತು. ಅಲ್ಲಿ ಕೂಡೋಣ ಅಂತ ಪಕ್ಕ ಸರಿದೆ. ಸೀಟಿನ ಮೇಲೆ ಮೊದಲೇ ಕೂತಿದ್ದವನು ಈಗಲೂ ಮೊದಲಿನ ರೀತಿಯಲ್ಲೇ ಕೈ ಅಡ್ಡ ಹಿಡಿದ. ಮುಂದೆ ನಿಂತಿದ್ದ ಮತ್ಯಾರನ್ನೋ ಅನ್ನಾವಾ ಇಂಗೇ ಜಾಗ ಇರುಕ್ಕಿ.... ಅಂದ!

ಅರೆ ಮಗನೆ ಪಕ್ಕದಲ್ಲಿ ನಿಂತು ಅಷ್ಟು ಹೊತ್ತಿಂದಾ ಜಾಗಕ್ಕೆ ಕಾಯ್ತಾ ಇದೀನಿ. ಈಗ ಹತ್ತಿದೋನು ಯಾರಿಗೋ ಜಾಗ ಇದೆ ಅಂತ ಕೈ ಅಡ್ಡ ಇಟ್ಟು ಕೂಗ್ತಾ ಇದೀಯಲ್ಲಾ, ಅವನಿಗೆ ಬಿಡಬೇಡ ಹೋಗೊ ಆ ಜಾಗದಲ್ಲಿ ಕೂತು ನಿನ್ನ ಹಕ್ಕು ಸ್ಥಾಪಿಸು ಅಂತ ಮನಸ್ಸು ಸೂಚನೆ ನೀಡಿಬಿಟ್ಟಿತು! ಅವನ ಕೈಯನ್ನು ಅತ್ತ ತಳ್ಳಿ ಅಲ್ಲಿ ಕೂತೆ. ಏನಯ್ಯ ಈಗ ಹತ್ತಿದೋರನ್ನ ಇಲ್ಲೀಗೆ ಕೂಗ್ತಾ ಇದೀಯಾ ಆಗಲಿಂದ ನಾವು ನಿಂತಿಲ್ಲವಾ ಅಂತ ರೇಗಿದೆ. ನನಗೂ ಅವನಿಗೂ ಜಗಳ ಹತ್ತಿಬಿಡ್ತು. ಮನೆಗೆ ಬರೋವರೆಗೂ ಜಗಳ ಆಡಿಕೊಂಡೇ ಬಂದೆ. ಮುಂದುಗಡೆ ಕೂತಿದ್ದ ಹೆಂಡತಿ ಆಗಾಗ್ಗೆ ಹಿಂದೆ ನೋಡೋದೂ ಜಗಳ ಚೆನ್ನಾಗಿ ಆಡು ಅಂತ ಕಣ್ಣಿನಲ್ಲೇ ಉತ್ತೇಜನ ಕೊಡೋದೂ ನಡೀತು! ಹೆಂಡತಿ ಜಗಳ ಆಡು ಅಂದಾಗ ಆಡದೇ ಇದ್ದರೆ ಅವನೆಂಥಾ ಗಂಡಸು ಆಡು ಚೆನ್ನಾಗಿ ಜಗಳ ಕಾಯಿ ಅಂತ ಮನಸೂ ಪ್ರೇರೇಪಿಸಿತು.

ಸ್ಟಾಪು ಬಂತು ಅಂತ ಇಳಿದೆವು. ಏನ್ರೀ ಹಾಗೆ ಜಗಳ? ಅಂತ ಯಾರು ಕೇಳಿದ್ದು ಅಂತ ತಿರುಗಿದರೆ ನಮ್ಮ ಹೆಡ್ಡು ಕಾಣಿಸಬೇಕೇ? ಅದು ಹೀಗೆ ಸಾರ್ ಅಂತ ವಿವರಿಸಿ ತಪ್ಪಾಯಿತು ಸಾರ್ ಮೈಂಡು ಕೈಕೊಟ್ಟಿತು... ಅಂದೆ! ಬಿಡ್ರೀ ನನಗೇ ಆತನ ಹತ್ತಿರ ಜಗಳ ಕಾದು ನಾಲ್ಕು ಬಾರಿಸಬೇಕು ಅನಿಸಿತ್ತು ಅಂದರು. ಸಾರ್ ಮೈಂಡು... ಅಂದೆ. ಅದು ಬೇರೆಯವರಿಗೆ ಹೇಳೋದಕ್ಕೆ ಮಾಡ್ತಾರೀ ನಾವು ಆಚರಿಸುತ್ತಾ ಕೂತರೆ ತುಳಿದು ಹಾಕ್ತಾರೆ ಅಷ್ಟೇ... ಅಂದರು!

(ಓ ಮನಸೇ ರಿಲ್ಯಾಕ್ಸ್ ಪ್ಲೀಸ್... ಸ್ವಾಮಿ ಸದ್ಯೋದಾನಂದರ ಪುಸ್ತಕ ಓದಿ ಬರೆದದ್ದು!)

ಉಸಿರು ಕಟ್ಟಿಸೋ ಕಥೆ

- ಬೇಲೂರು ರಾಮಮೂರ್ತಿ

ಒಂದಿನ ಏನಾಯ್ತೂಂದ್ರೆ, ಸಾಯಂಕಾಲ ಮನೆ ದೀಪ ಹಾಕಿದ್ದೇ ತಡ ಶ್ರೀಮಾನ್ ಸಿಂಗಾರಿಯವರು ದೀಪದ ಕಡೆ ನೋಡಿ ಕೈ ಮುಗಿದು ದೀಪಂ ಜ್ಯೋತಿ ಪರಬ್ರಹ್ಮ, ದೀಪಂ ಜ್ಯೋತಿ ನಮೋಸ್ತುತೇ, ದೀಪೇನ ಹರತೇ ಪಾಪಂ ಸಂಧ್ಯಾ ದೀಪಂ ನಮೋಸ್ತುತೇ ಅಂತ ಅನ್ನೋದಿಕ್ಕೂ ಅದೇ ಬೀದಿಯ ಅಂಚಿನ ಮನೆ (ಅಂದ್ರೆ, ಕೊನೇ ಮನೇಂತ - ಹೆಂಚಿನ ಮನೆಗೆ ಅಂಚಿನ ಮನೆ ಅಂತ ಬರ್ದಿದಾನೆ ಅಂದ್ಕೋಬೇಡಿ) ಸರ್ವೇಯರ್ ಸುಬ್ಬನರಸಿಂಹನ ಕೊನೇ ಮಗಳು ಜಲಜಾಕ್ಷಿಯ ದೊಡ್ಡ ಮಗಳು ದೀಪ ಚೆನ್ನಾಗಿ ಅಲಂಕರಿಸಿಕೊಂಡು ಸಿಂಗಾರಿಯ ಮನೆ ಮುಂದೆ ನಿಂತದ್ದಕ್ಕೂ ಸರಿಯಾಗಿ ಇದನ್ನು ಸಿಂಗಾರಿಯ ಹೆಂಡ್ತಿ ಅರ್ಥಾತ್ ಧರ್ಮಪತ್ನಿ, ಇತ್ತೀಚೆಗೆ ಸಿಂಗಾರಿಯವರ ದೃಷ್ಟಿಯಲ್ಲಿ ಕರ್ಮಪತ್ನಿ ಕೆಂಗಣ್ಣು ಬಿಟ್ಟು ಗಂಡನನ್ನು ನೋಡಿ ಮತ್ತೆ ದೀಪ ಕಡೆ ನೋಡಿ, ದೀಪ ಕೈ ಹಿಡಿದು ಒಳಗೆ ಕರೆದುಕೊಂಡು ಹೋಗಿ, ಯಾಕೆ ಬಂದೆ, ಏನ್ಸಮಾಚಾರ ಅಂತ ಕೇಳಿದ್ಮೇಲೆ ದೀಪ ತನ್ನ ಜಡೆ ಸವರಿಕೊಳ್ತಾ ಇವತ್ತು ಸಂಜೆ ನಮ್ಮನೇಲಿ ಲಕ್ಷ್ಮೀಪೂಜೆ ಮಾಡ್ತಾರೆ, ನೀವು ಖಂಡಿತಾ ಬರಬೇಕಂತೆ ಅಂದ್ಮೇಲೆ ಖಂಡಿತಾ ಬರ್ತೀನಿ, ಕುಂಕುಮ ಇಟ್ಕೊ ನೀ ನಡಿ ಇಲ್ಲಿಂದ ಅಂದು ದೀಪನ್ನ ಸರಸರ ರಟ್ಟೆ ಹಿಡಿದು ಮನೆಯಿಂದಾಚೆ ಕರ್ಕೊಂಡು ಬಂದು ಟಾಟಾ ಮಾಡಿ ಮತ್ತೆ ಒಳಗೆ ಬಂದು ಗಂಡನ ಕಡೆ ನೋಡಿ ಇಷ್ಟು ವಯಸ್ಸಾದ್ರೂ ಬುದ್ಧಿ ಬರ್ಲಿಲ್ಲ ನಿಮ್ಮ ದರಿದ್ರದ ಚಪಲದ ಬುದ್ಧಿ ಎಲ್ಲಿ ಬಿಡ್ತೀರ ಅಂದು ಬೈದಾಗ ಸಿಂಗಾರಿ, ಏನೇ ನೀನು ಹೇಳೋದು, ನಾನು ಆ ಹುಡುಗಿ ಕಡೆ ದೃಷ್ಟಿ ಹರಿಸ್ತಿನೇನೇ. ನಿನ್ನ ಹೊಲಸು ಯೋಚನೆ ಬಿಡೆ ಅಂತ ದಬಾಯಿಸಿದಾಗ ಆಕೆ ಗಳಗಳ ಅಳುತ್ತ, ಮಾಡೋದು ನೀವು ತಪ್ಪು ಕೆಲಸ. ನನ್ನನ್ನ ದಬಾಯಿಸ್ತೀರ ಅಂದು ಮೂಲೆ ಸೇರಿ ಕೂತಾಗ ಅವಳನ್ನು ಸಮಾಧಾನ ಮಾಡೋಣ ಅಂದು ಒಂದು ಹೆಜ್ಜೆಯಿಟ್ಟು ಸಿಂಗಾರಿ, ಬೇಡ ಸ್ವಲ್ಪ ಹೊತ್ ಹೋದ್ರೆ ಅವಳೇ ಸರಿಹೋಗ್ತಾಳೆ ಅಂದ್ಕೊಂಡು ನಶ್ಯದ ಡಬ್ಬಾ ಸೊಂಟಕ್ಕೇರಿಸಿಕೊಂಡು ಮಂಟಪದ ಕಡೆ ಹೊರಟಾಗ ಅವರ ಜೊತೆಗೆ ಸಚ್ಚಿಯವರೂ ಸೇರಿಕೊಂಡು ಇಬ್ಬರೂ ಕಷ್ಟಸುಖ ಹೇಳಿಕೊಂಡು ನಡೀತಾ ಇದ್ದಾಗ ಎದುರು ದಿಕ್ಕಿನಿಂದ ಬರುತ್ತಿದ್ದ ಒಂದು ಹುಡುಗೀನ ಸಚ್ಚಿ ಕೆಕ್ಕರಿಸಿಕೊಂಡು ನೋಡಿ ಆಮೇಲೆ ಏಯ್ ಸಿಂಗಾರಿ ನೀನು ಏನೇ ಹೇಳು. ಈಗಿನ ಕಾಲದ ಹುಡುಗಿಯರ ಬ್ಯೂಟಿನೇ ಬೇರೆ, ಸ್ಟೈಲೇ ಬೇರೆ. ನಮ್ ಕಾಲದಲ್ಲಿ ಇಂಥವು ಇದ್ವೇನೋ. ಇವುಗಳನ್ನು ನೋಡಿ ನೋಡಿ, ಮೈಮರೆಯೋಣ ಅನ್ನಿಸುತ್ತೆ ಅಂದಾಗ ಸಿಂಗಾರಿ ಮನೇಲಿ ನಡೆದ ಅನುಭವವನ್ನು ತಿಳಿಸಿ ಬೇಜಾರಾಗಿ ತಲೆ ಮರೆಸಿಕೊಂಡು ಬಂದೆ ಅಂದಾಗ ಅದೇ ತಾನೇ ಮಂಟಪಕ್ಕೆ ಕಾಲಿಟ್ಟ

ಚೆಲುವರಾಯ ಅದಿಕ್ಕೆ ನಿನ್ನನ್ನು ದಡ್ಡ ಬಡ್ಡೀಮಗ ಅನ್ನೋದು. ಹುಡುಗಿಯರನ್ನು ಯಾರಾದ್ರೂ ಮನೇಲಿ ನೋಡ್ತಾರೇನೋ. ಅದೂ ಹೆಂಡ್ತಿ ಮನೇಲಿರುವಾಗ ಅಂದು ಅದಕ್ಕೆ ಅನೇಕ ಸುಲಭೋಪಾಯಗಳನ್ನು ತಿಳಿಸಿದಾಗ ಸಿಂಗಾರಿ ಒಂದು ಚಿಟಿಕೆ ನಶ್ಯ ಮೂಗಿಗೇರಿಸಿ ಡಬ್ಬಿಯನ್ನು ಅವರುಗಳತ್ತ ಚಾಚಿ ಬಿಡ್ರೀ ಯಾವೋನಿಗೆ ಬೇಕಾಗಿದೆ. ನನ್ನ ಪಾಡಿಗೆ ನಾನು ದೀಪದ ಜ್ಯೋತಿ ಹೇಳ್ತಾನೇ ಇದ್ರೆ ಆ ಹುಡುಗಿ ಬಂದ್ರೆ ನಾನೇನೋ ಮಾಡ್ಲಿ. ಮೊದಲೇ ನನ್ ಹೆಂಡ್ತಿ ಅನುಮಾನದ ಪಿಶಾಚಿ. ಎತ್ಲಗಾದ್ರೂ ಸಾಯ್ಲಿ ಅಂತ ಈಕಡೆ ಬಂದಾಗ ಸಚ್ಚಿಯೂ, ಚೆಲುವರಾಯನೂ ಸಿಂಗಾರಿಯನ್ನು ಯದ್ವಾತದ್ವಾ ಸಮಾಧಾನ ಮಾಡಿ ವೆಂಕಟರಮಣದ ಅಂಗಡಿಗೆ ಕರ್ಕೊಂಡು ಹೋಗಿ ಬಿಸಿಬಿಸಿ ವಡೆ ಚಟ್ನಿ ಕೊಡಿಸಿದ ಮೇಲೆ ಸಿಂಗಾರಿ ಸ್ವಲ್ಪ ಸಮಾಧಾನಗೊಂಡು ನಗುತ್ತಿರುವಾಗ ಆಯ್ಯೋ ಬೇಕೂಫ್, ಹೆಂಡ್ತಿ ಏನೋ ಅಂದ್ಲು ಅಂತ ಹೀಗೆ ಸಿಟ್ ಮಾಡ್ಕೊಂಡು ಮನೆಗೆ ಬೈಬೈ ಹೇಳಿ ಆಚೆ ಬರೋ ಬದಲು ಅಲ್ಲೇ ಇದ್ದು ಹಾಡಿ ಹೊಗಳಿ ಲೇ ನಿನ್ನ ಮುಂದೆ ಬೇರೆ ಯಾರೇ. ನಿನ್ನ ಸೌಂದರ್ಯದ ಮುಂದೆ ಬೇರೆ ಯಾರೇ. ಸೌಂದರ್ಯ ಅನ್ನೋ ಪದ ಹುಟ್ಟಿದ್ದೇ ನಿನ್ನಿಂದ ಅಲ್ವೇನೇ ಅಂತ ಬೊಂಬಾಟಾಗಿ ಹೊಗಳಿದ್ರೆ ಹೆಂಡ್ತಿ ಎಲ್ಲಾನೂ ಮರೆತು ಹೌದೇನ್ರೀ ಅಂದು ಕೆನ್ನೆ ಸವರ್ತಾ ಇದ್ಲಲ್ಲ ಅಂತ ಹೇಳಿದಾಗ ಇಂಥಾ ಸಲಹೆಗೆ ಬಗ್ಗದ ಸಿಂಗಾರಿ ಇದೆಲ್ಲ ನಮ್ಮಲ್ಲಿ ನಡೆಯಲ್ಲಮ್ಮ ಅಂದಾಗ ಚೆಲುವರಾಯ ತನ್ನ ಅನುಭವವನ್ನೆ ತಿಳಿಸ್ತಾ ಲೇ ಹೆಂಗಸರು ಯಾವುದಕ್ಕೆ ಮರುಳಾಗ್ತಾರೆ ಅಂತ ತಿಳ್ಕೊಳೇ. ಅವರನ್ನು ಯಾವಾಗಲೂ ಹೊಗಳ್ತಾ ಇರಬೇಕೋ ಅವಾಗ್ಲೇ ಅವರು ಪ್ರಸನ್ನರಾಗೋದು ಅಂತ ಹೇಳಿ ತನ್ನ ಜೀವನದ ಉದಾಹರಣೆಯಿಂದ ಒಂದು ವಿಷಯವನ್ನು ತಿಳಿಸುತ್ತಾ ಒಂದ್ಸಾರಿ ನಾನು ನಿಜವಾಗ಼್ೂ ಅವಳ ಕೈಗೆ ಯಾವುದೋ ವಿಚಾರಕ್ಕೆ ಸಿಕ್ಕಿಕೊಂಡ ತಕ್ಷಣ ಅವಳು ನನ್ ಮೇಲೆ ರೇಗೋದಲ್ಲಿದ್ಲು ಅಂತ ಗೊತ್ತಾದ ತಕ್ಷಣ ಲೇ ಲೇ ಭಾಮಿನಿ ನೀನು ಅದೆಷ್ಟು ಚೆನ್ನಾಗಿದೀಯೇ. ಅಲ್ಲ ಕಣೆ ನಮ್ಮ ಮದುವೆಯಾಗಿ ಮೂವತ್ತು ವರ್ಷವಾಯ್ತು, ಮೂರು ಮಕ್ಕಳಾದವು. ಆರು ಮೊಮ್ಮಕ್ಕಳಾದವು. ಆದರೂ ನೀನು ಹಾಗೇ ಇದೀಯಲ್ಲೇ, ಯಾರಾದರೂ ನಿನ್ನನ್ನ ನೋಡಿದರೆ ಅನಾಮತ್ತಾಗಿ ಎತ್ತಿ ಹಸೆಮಣೆಗೆ ಏರಿಸ್ತಾರಲ್ಲೇ ಅಂತ ಅಂದಾಗ ಅವಳು ಉಬ್ಬಿ ಹೌದೇನ್ರಿ ನನ್ನ ಅನೇಕ ಸ್ನೇಹಿತೆಯರೂ ಹೀಗೇ ಹೇಳ್ತಿದ್ರು ಅಂದು ಖುಷಿಯಿಂದ ಅವತ್ತು ಪಾಯಸದ ಅಡಿಗೆ ಮಾಡಿ ಹಾಕಿ ಸ್ವರ್ಗದಲ್ಲೇ ತೇಲಾಡ್ತಿದ್ಲು ಅಂತ ಹೇಳಿ ತನಗೆ ಅವಳಿಂದ ಯಾವ ಕೆಲಸ ಆಗಬೇಕಾದರೂ ಅವಳನ್ನು ಹಾಡಿ ಹೊಗಳಿ ಕೆಲಸ ಮಾಡಿಸ್ಕೋತೀನಿ ಅಂತ ಡಿಟೈಲ್ ಆಗಿ ವಿವರಿಸಿದ ಮೇಲೆ ಸಿಂಗಾರಿ ಹೌದು ಇದೂ ಒಂದು ವರಸೆ ಯಾಕೆ ಪ್ರಯತ್ನ ಮಾಡಬಾರದು ಅಂತ ಚೆಲುವರಾಯನಿಗೆ ಧನ್ಯವಾದ ತಿಳಿಸಿ ಇನ್ನೇನು ಏಳಬೇಕು ಅಂದ್ಕೊಂಡಾಗ ಚೆಲುವರಾಯ ಸಿಂಗಾರಿಯನ್ನು ಭುಜ ಅದುಮಿ ಕೂರಿಸಿ ಇನ್ನೂ ಮುಗಿದಿಲ್ಲ ಇರಮ್ಮ

ಅಂದು ಎರಡನೇ ಅಧ್ಯಾಯದಂತೆ ಮತ್ತಷ್ಟು ವಿವರಗಳನ್ನು ಕೊಡುತ್ತಾ ಹೆಂಡ್ತಿರನ್ನ ಹೊಗಳೋದೂ ಒಂದು ಕಲೆ. ಪೆದ್‌ಪೆದ್ದಾಗಿ ಮಾತಾಡ್ತಾ ಸಿಕ್‌ಹಾಕ್ಕೋಬಾರ್ದು. ಹೊಗಳಿದ್ರೂ ಅದು ಸಹಜವಾಗಿರಬೇಕು.

ಹೇಗೇಂದ್ರೆ, ಅವರ ಅಡಿಗೆಯಿಂದ ಹೊಗಳೋಕೆ ಷುರುಮಾಡಿ, ಅಕ್ಕಪಕ್ಕದ ಮನೆಯ ಹೆಂಗಸರನ್ನು ನಿವಾಳಿಸಿ ಬಿಸಾಕಿ ಇಡೀ ಊರಿಗೆ ಅವಳೊಬ್ಬಳೇ ಪದ್ಮಾವತಿ ಅಂತ ಹೇಳಿ ನೀನಿದ್ದ ಮೇಲೆ ನಾನು ಬೇರೆ ಯಾವ ಹೆಣ್ಣನ್ನ ನೋಡ್ಲೇ ಅಂಥ ಹೇಳಿ ಚಿನ್ನದ ತಟ್ಟೇಲಿ ಮೃಷ್ಟಾನ್ನ ಇಟ್ಕೊಂಡು ಮಣ್ಣಿನ ತಟ್ಟೆಯ ಅಂಬಲಿಗೆ ಯಾರೇ ಆಸೆ ಪಡ್ತಾರೆ ಅಂತ ಹೇಳಿ ಉಬ್ಬಿಸಿದರೆ ಅವರ ಅನುಮಾನ ಪರಿಹಾರವಾಗುತ್ತೇ ಅಂತ ಹೇಳಿದ ಮೇಲೆ ಸಿಂಗಾರಿ ಎದ್ದು ಮನೆಗೆ ಹೊರಟಾಗ ಚೆಲುವರಾಯನೂ, ಸಚ್ಚಿಯವರೂ ಬೆಸ್ಟ್ ಆಫ್ ಲಕ್ ಅಂತ ಕೈ ಬೀಸಿದ ಮೇಲೆ ತಾವೂ ಕೈ ಬೀಸಿ ಮನೆಯತ್ತ ಸರಸರ ನಡೆದ ಸಿಂಗಾರಿ ಹೇಗಾದರೂ ಆಗಲಿ ಅಂತ ಒಂದು ಮೂರು ಮೊಳ ಮಲ್ಲಿಗೆ ಹೂವು ತಗೊಂಡು ದಾಪುಗಾಲು ಹಾಕಿ ಮನೆಗೆ ಬಂದಾಗ ಅವರ ಪತ್ನಿ ಬಾಗಿಲಲ್ಲೇ ನಿಂತಿದ್ದು ತುಂಬಾ ಕೋಪದ ಮುಖದಲ್ಲಿದ್ದರೂ ಪತಿಯ ಕೈಯಲ್ಲಿದ್ದ ಮಲ್ಲಿಗೆ ಕಂಡು ಮೆಲ್ಲಗೆ ನಕ್ಕು ತಕ್ಷಣ ಆಗಲೇ ಇದ್ದ ಕೋಪವನ್ನು ಮತ್ತೆ ಬರಿಸಿಕೊಂಡು ಗಂಡನನ್ನು ಕೋಪದ ದೃಷ್ಟಿಯಿಂದ ನೋಡಿದಾಗ ಚೆನ್ನಾಗಿ ಪ್ರಿಪೇರ್ ಆಗಿ ಬಂದಿದ್ದ ಸಿಂಗಾರಿ ಆಹಾ, ಏನು ಸೌಂದರ್ಯ, ಎಂಥಾ ಸೌಂದರ್ಯ, ಬಹಳ ಅಪರೂಪದ ಸೌಂದರ್ಯ, ಬೇರೆ ಯಾರಿಗೂ ಇಲ್ಲದ ಸೌಂದರ್ಯ ಎಷ್ಟು ವಯಸ್ಸಾದರೂ ಮಾಗದ ಸೌಂದರ್ಯ ಅಂತ ಯದ್ವಾಬಿದ್ವಿ ಹೊಗಳೋಕೆ ಷುರು ಮಾಡ್ದಾಗ ಹೆಂಡ್ತಿ ಹತ್ರ ಬಂದು ಸಿಂಗಾರಿಯ ರಟ್ಟೆ ಹಿಡಿದು ತಿರುಚಿದಾಗ ಸಿಂಗಾರಿ ಲಬೋಲಬೋ ಅಂತ ಕಿರುಚಿಕೊಂಡಾಗ ಹೆಂಡ್ತಿ ಗಟ್ಟಿಯಾದ ಸ್ವರದಿಂದ ಯಾರ್ರೀ ಅವಳು ಸೌಂದರ್ಯ, ಅವಾಗೆಲ್ಲ ದೀಪ ಆಯ್ತು ಈಗ ಸೌಂದರ್ಯ, ಇನ್ನೂ ಎಷ್ಟು ಜನರನ್ನು ಇಟ್ಕೊಂಡಿದೀರ ಹೇಳಿ ಅಂತ ಗುಡುಗಿದಾಗ ನೋವಿನಿಂದ ನರಳುತ್ತಾ ಸಿಂಗಾರಿ ಅಯ್ಯೋ ದೇವರೇ ಇವಳ ಮುಂದೆ ಯಾವ ಹುಡುಗಿಯ ಹೆಸರನ್ನು ಹೇಳೋದೇ ಕಷ್ಟವಲ್ಲಪ್ಪ ಅಂತ ನೋವು ತಿನ್ನುತ್ತಾ ಮುಂದೇನು ಮಾಡಬೇಕಂತ ತಿಳಿಯದೇ ಹೆಂಡ್ತಿ ಹಿಡಿತದಿಂದ ಬಿಡಿಸ್ಕೋಬೇಕು ಅಂತಿದ್ದಾಗ ಹೆಂಡ್ತಿ ಅವರನ್ನು ದೂರಕ್ಕೆ ತಳ್ಳಿ ಇವತ್ತು ನಿಮಗೆ ಉಪವಾಸ ಹಾಕ್ತೀನಿ. ಅದ್ಯಾವೋಳು ದೀಪನೇ, ಸೌಂದರ್ಯನೇ ಅದ್ಯಾರು ಬಂದು ನಿಮಗೆ ಹಿಟ್‌ಹಾಕ್ತಾರೆ ನಾನೂ ನೋಡ್ತೀನಿ ಅಂತ ಒಳಗೆ ಹೋದಾಗ ಅಯ್ಯೋ ದೇವರೇ ಈ ಸಾರಿ ಗಣಪತಿ ಹಬ್ಬದ ದಿನ ನಾನು ಚಂದ್ರನ್ನ ನೋಡ್ಲಿಲ್ಲ. ಆದ್ರೂ ಯಾಕೆ ಹೀಗೆ ಅಂತ ನಿಜವಾಗಲೂ ಅಳುತ್ತಾ ಅಲ್ಲೇ ಇದ್ದ ಹೂಜಿಯಿಂದ ನೀರನ್ನು ಗಟಗಟನೆ ಕುಡಿದರು.

★★★

ಅಪರಂಜಿಯ ಇಪ್ಪತ್ತರ ಹುಟ್ಟುಹಬ್ಬದ ಸಂಭ್ರಮದ ಆಚರಣೆಗೆ ತಮಗೆಲ್ಲಾ ಸ್ವಾಗತ

ಕಾರ್ಯಕ್ರಮದ ಉದ್ಘಾಟನೆ

ಶ್ರೀ ಎಂ.ಎಸ್. ಸತ್ಯು (ಖ್ಯಾತ ಚಲನಚಿತ್ರ ನಿರ್ದೇಶಕರು)

ಅಪರಂಜಿ ರಸರಂಜಿ (ಇಪ್ಪತ್ತು ವರುಷಗಳ ಆಯ್ದ ಬರಹಗಳು)

ಹಾಸ್ಯ ರಂಗೋಲಿ (ಬೇಲೂರರ ನಗೆ ಚುಟಕಗಳು)

ಈ ಎರಡೂ ಪುಸ್ತಕಗಳನ್ನು ಹರಸುವವರು

ಶ್ರೀ ಜಿ. ನಾರಾಯಣ (ಸಂಪಾದಕರು, ವಿನೋದ)

ಆರ್.ಕೆ. ಲಕ್ಷ್ಮಣ್‌ರ ವ್ಯಂಗ್ಯ ದರ್ಶನ - ನಾಲ್ಕು ಮಾತು

ಪ್ರೊ. ಎಚ್.ಕೆ. ರಾಮಚಂದ್ರಮೂರ್ತಿ

ಅಪರಂಜಿಯ ಹಿರಿಯ ಬರಹಗಾರರಿಗೆ ಸನ್ಮಾನ:

ಸನ್ಮಾನಿತರು:

ಶ್ರೀಮತಿ ಭುವನೇಶ್ವರಿ ಹೆಗಡೆ

ಶ್ರೀ ಎಚ್.ಎಲ್. ಕೇಶವಮೂರ್ತಿ

ಶ್ರೀ ಶ್ರೀನಿವಾಸ ವೈದ್ಯ

ಕಾರ್ಯಕ್ರಮದ ಅಧ್ಯಕ್ಷತೆ:

ಪ್ರೊ. ಜಿ. ವೆಂಕಟಸುಬ್ಬಯ್ಯ

ತಮ್ಮ ಬಂಧು ಮಿತ್ರರೊಡನೆ ಆಗಮಿಸಿ ನಮ್ಮ ಹರ್ಷೋಲ್ಲಾಸದಲ್ಲಿ ಭಾಗಿಯಾಗುವಿರೆಂದು ನಂಬಿ,

ತಮ್ಮ

ಶಿವಕುಮಾರ್

ಸಂಪಾದಕ, ಅಪರಂಜಿ

ನಿರ್ವಹಣೆ: **ಬೇಲೂರು ರಾಮಮೂರ್ತಿ**

ನಗೆ ಗೀತೆಗಳು: **ಪಾರ್ವತೀಸುತ**

ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು

ದಿನಾಂಕ: ಶನಿವಾರ, ನವೆಂಬರ್ 8, 2003

ಸಮಯ: ಸಂಜೆ 6ಕ್ಕೆ

ವೇರ್ ಹಾರ್ಟ್ ಡೋ....

– ವೈ.ಎನ್. ಗುಂಡೂರಾವ್

ಪರಮೇಶಿ ಯಾವಾಗ ಬಂದರೂ ಏನಾದರೊಂದು ಅರ್ಜೆಂಟ್ ಕೆಲ್ಸ ಇಟ್ಕೊಂಡೇ ಬಂದಿರ್ತಾನೆ. ಬಂದವನಿಗೆ ಕಾಫಿ ಕೊಟ್ಟು, ಹೇಳಯ್ಯಾ ಅದೇನು, ಅಷ್ಟೊಂದು ಅರ್ಜೆಂಟ್ ಆಗಿ ಬಂದದ್ದು, ಅದೂ ಆಫೀಸಿಗೆ ಹೋಗೋದು ಬಿಟ್ಟು ಎಂದಾಗ ಕಾಫಿ ಕುಡಿದ ಲೋಟವನ್ನು ಟೀಪಾಯಿ ಮೇಲಿಡುತ್ತಾ ''ನಿನ್ನೆ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಹೋಗಿದ್ಯಾ?'' ಎಂದ.

''ಯಾವ ಪುಸ್ತಕ ಬಿಡುಗಡೆ... ಈ ವಾರದಲ್ಲಿ ಆಗ್ಲೇ ನಾಲ್ಕೈದು ಕನ್ನಡ ಪುಸ್ತಕಗಳು ಬಿಡುಗಡೆಯಾಯ್ತಲ್ಲ?'' ಎಂದೆ.

''ಅಯ್ಯೋ ಅದಲ್ಲಪ್ಪ, ಕನ್ನಡ ಪುಸ್ತಕ ಯಾರಿಗೆ ಬೇಕಾಗಿದೆ. ಈಗೇನಿದ್ರು ಇಂಟರ್ ನ್ಯಾಷನಲ್ ನ್ಯೂಸ್ ಮಾಡೋ ಇಂಗ್ಲೀಷ್ ಪುಸ್ತಕದ ಬಗ್ಗೆ ನಾನು ಹೇಳ್ತಾಯಿರೋದು'' ಎಂದ.

''ಅರೆ, ಪರಮೇಶಿ, ಇದ್ಯಾವತ್ತಿನಿಂದ ನಿಂಗೆ ಈ ಹುಚ್ಚು ಕೂಡಾ ಹಿಡಿಯಿತು. ಏನೋ ಕನ್ನಡದಲ್ಲಿ ಅಷ್ಟು ಇಷ್ಟು ಬರ್‍ಕೊಂಡಿದ್ಯಾ, ಪುಸ್ತಕಗಳನ್ನು ಕೊಂಡ್ಕೊಂಡು ಓದ್ತಾಯಿದ್ಯಾ... ಆದರೆ ಈಗ ಇಂಗ್ಲಿಷ್ ಪುಸ್ತಕ ಓದೋ ಹುಚ್ಚು ಹಿಡಿಸ್ಕೊಂಡಿದ್ಯಾ? ಒಳ್ಳೆಯದೇ... ಓದು, ಓದು, ಜ್ಞಾನಾಭಿವೃದ್ಧಿಯಾದರೂ ಆದೀತು'' ಎಂದು ಹೇಳಿ ಅದೇ ಮೊನ್ನೆ ಬ್ರೆಜಿಲ್‌ನ ರಯೋಡಿಜನ್ಯೆರೋದಲ್ಲಿ ಸಲ್ಮಾನ್ ರಶ್ಮಿ ಬಿಡುಗಡೆ ಮಾಡಿದ ತಮ್ಮ ಹೊಸ ಪುಸ್ತಕ 'ಫ್ಯೂರಿ' ಬಗ್ಗೆ ತಾನೇ ನೀನು ಕೇಳುತ್ತಿರುವುದು, ಅದು ಇಂಡಿಯಾಗೆ ಬರಲು ಇನ್ನೂ ಒಂದೆರಡು ತಿಂಗಳಾದರೂ ಬೇಕು ಎಂದೆ. ಅಯ್ಯೋ ಅದಲ್ಲಪ್ಪ, ಎಂದು ತಲೆ ಕೆರೆದುಕೊಂಡಾಗ, ನಾನೇ ಅವನಿಗೆ ಕೆಟಲಿಸ್ಟ್ ರೀತಿ ಆದೇ ಮೊನ್ನೆ ಬಿಡುಗಡೆಯಾದ ವಿಕ್ರಂ ಸೇಥ್‌ರ ಪುಸ್ತಕವಾ? ಎಂದೆ.

ಅಯ್ಯೋ ಅದೂ ಅಲ್ಲಪ್ಪ, ಎಂದು ತಲೆ ಕೂದಲು ಕಿತ್ತುಕೊಂಡ ಪರಮೇಶಿ. ಪರದೇಶಿಗಳು ಬರೆದ ಪುಸ್ತಕವಲ್ಲಪ್ಪ, ನಮ್ಮ ಇಂಡಿಯಾದವರೇ ಬರೆದ ಪುಸ್ತಕದ ಬಗ್ಗೆ ನಾನು ಹೇಳುತ್ತಿರುವುದು ಎಂದು ತಲೆ ಚಚ್ಚಿಕೊಂಡ.

ಸರಿ, ಈಗ ಗೊತ್ತಾಯ್ತು ಬಿಡು. ಮೊನ್ನೆ ಎಂ.ಎಫ್. ಹುಸೇನ್‌ರವರು ಬಿಡುಗಡೆ ಮಾಡಿದ ಪುಸ್ತಕದ ಬಗ್ಗೆ ಅಲ್ಲವಾ ನೀನು ಹೇಳುತ್ತಿರುವುದು. ಈಗ ಅರ್ಥವಾಯಿತು. ಅವರು ಸುಮಾರು ಹತ್ತು ವರ್ಷಗಳಿಂದಲೂ ಆತ್ಮಚರಿತ್ರೆ ಬರೆಯಲು ಪ್ರಾರಂಬಿಸಿ ಅದು ಹೇಗೆ ಹೇಗೋ ಬೆಳೆಯುತ್ತಾ ಹೋಗಿ ಕಲಾ ಪ್ರಪಂಚಕ್ಕಿಂತ ಸಿನಿಮಾ ಪ್ರಪಂಚ

ಪ್ರವೇಶಿಸಿದ್ದರಿಂದ ಆತ್ಮಚರಿತ್ರೆ ಬರೆಯೋದನ್ನ ನಿಲ್ಲಿಸಿಬಿಟ್ಟರಂತೆ. ನಂತರ ಅದೇನನ್ನಿಸಿತೋ ಹೇಗಾದರೂ ಮಾಡಿ ಆತ್ಮಚರಿತ್ರೆ ಬರೆದು ಮುಗಿಸಲೇ ಬೇಕೆಂದು ಹಠತೊಟ್ಟು, ಪಟ್ಟಾಗಿ ಕುಳಿತು ಬರೆದು ಮುಗಿಸಿದರಂತೆ. ಅದೇ ಪುಸ್ತಕವೇ ಈಗ ಬಿಡುಗಡೆಯಾಗಿರುವುದು. ''ವೇರ್ ಹಾಟ್ ದೋ....'' ನೀನು ಹೇಳುತ್ತಿರುವುದು ಅದೇ ತಾನೆ.

ಅಲ್ಲಾ ಪರಮೇಶಿ, ಅದು ವೇರ್ ಹಾರ್ಟ್ ದೋ... ಅಲ್ಲ ''ವೇರ್ ಹಾರ್ಟ್ ದೌ'' ಎಂದಿರಬೇಕು ಎಂದೆ ಮತ್ತೊಮ್ಮೆ.

ಇಲ್ಲಪ್ಪ ಅದು ವೇರ್ ಹಾರ್ಟ್ ದೋ ನೇ ಇರಬೇಕು, ಪತ್ರಿಕೆಗಳಲ್ಲಿ ಅದು ತಪ್ಪಾಗಿ ಮುದ್ರಿತವಾಗಿರಬೇಕು. ಏಕೆಂದರೆ ನೀನು ಹೇಳಿದ ಹಾಗೆ ಆತ್ಮಚರಿತ್ರೆ ಏಕೆ ಬರೆಯೋದನ್ನ ನಿಲ್ಲಿಸಿದರು ಅಂದ್ರೆ, ಅವರಿಗೆ ಹತ್ತಿಕೊಂಡ ಸಿನಿಮಾ ಖಯಾಲಿ. ಮಾಧುರಿ ದೀಕ್ಷಿತಳನ್ನು ತರಹೇವಾರಿಯಾಗಿ ಚಿತ್ರಿಸಿ ಫೇಮಸ್ ಆಗಿದ್ದಲ್ಲದೆ ಅವಳ ಜೊತೆ ಸೇರ್ಕೊಂಡು ಗಜಗಾಮಿನಿ ಸಿನಿಮಾ ಕೂಡಾ ತೆಗೆದರು ನಿಂಗೆ ಗೊತ್ತಿಲ್ವಾ?

ನಂತರ ಅವಳನ್ನು ಬಿಟ್ಟು 'ತಬು' ಅನ್ನೋ ಸಿನಿಮಾ ನಟಿ ಸಹವಾಸ ಮಾಡಿದ್ರು ಅಲ್ವಾ? ಮತ್ತೆ ಅವರಿಗೆ ಈ ಇಬ್ಬರು ಸಿನಿಮಾ ನಟಿಯರನ್ನು ಸ್ನೇಹ ಮಾಡಿದ ಮೇಲೆ ಆತ್ಮಚರಿತ್ರೆ ಬರೀಲೇಬೇಕು ಅನ್ನಿಸಿ ಬರೆಯಲು ಪ್ರಾರಂಭಿಸಿದ್ದು ಈ ಇಬ್ಬರು ಸಿನಿಮಾ ನಟಿಯರ ಪ್ರವೇಶದಿಂದ ಎರಡು ಕವಲಾಗಿ ಒಡೆದ ಮೇಲೆ ಇಬ್ಬರಿಗೂ ಹೃದಯ ಹಂಚಿದ ಮೇಲೆ ಬರೆದ ಕತೆ ಹೃದಯಕ್ಕೆ ಸಂಬಂಧಿಸಿದ್ದೇ ತಾನೆ! ತಾವು ಈ ರೀತಿ ಇಬ್ಬರು ಚಲನಚಿತ್ರ ತಾರೆಯರ ಕೈಲಿ ಸಿಕ್ಕಿಹಾಕಿಕೊಂಡು ಒದ್ದಾಡಿದ ಈ ಮುದುಕನಿಗೆ ಹಾರ್ಟ್ಇದ್ರೂ ಎಲ್ಲಿತ್ತೋ...?? ಅಂತೂ ಇದ್ದ ಮುದಿ ಹಾರ್ಟ್ ಕೂಡಾ ಒಡೆದು ಎರಡು ಚೂರು ಚೂರಾದ ಮೇಲೆ ಬರೆದ ಅವರ ಆತ್ಮಚರಿತ್ರೆಯೇ ವೇರ್ ಹಾರ್ಟ್ ದೋ... ನಾವು ಕನ್ನಡ ಇಂಗ್ಲಿಷ್ ಸೇರಿಸಿ ಮಾತಾಡೋ ಹಾಗೆ, ಪುಸ್ತಕಕ್ಕೆ ತಲೆಬರಹ ಕೊಡೋದಿಲ್ವಾ ಹಾಗೆ! ಇದೂ ಕೂಡಾ ಇಂಗ್ಲಿಷ್ ಹಿಂದಿ ಸೇರಿಸಿ ಇಟ್ಟಿರೋ ಆ ಪುಸ್ತಕವೇ 'ವೇರ್ ಹಾರ್ಟ್ ದೋ...' ಈಗ ಅವರ ಒಡೆದ ಹೃದಯದ ಎರಡು ಚೂರುಗಳನ್ನು ಹುಡುಕಬೇಕಿದೆ, ಬಹುಶಃ ಆ ಪುಸ್ತಕ ಕೊಂಡುಕೊಂಡು ಓದಿದರೆ ಸಿಕ್ಕಬಹುದೇನೋ ಎಂದ ಪರಮೇಶಿ.

ಪರಮೇಶಿಯ ವಾದಕ್ಕೆ ಹ್ಯಾಟ್ಸ್ ಆಫ್ ಹೇಳಿ, ಸರಿ ಸಿಕ್ಕರೆ ಕೊಂಡ್ಕೊಂಡು ಬರ್ತೇನೆ. ಈಗ ಆಫೀಸಿಗೆ ಹೊತ್ತಾಯ್ತು ನಡೀ ನಡೀ ಎಂದು ಹೊರಡಿಸಿದೆ.

(ಕೆಲವು ತಿಂಗಳ ಹಿಂದೆ ಎಂ.ಎಫ್. ಹುಸೇನರ 'ವೇರ್ ಹಾರ್ಟ್ ದೌ' ಪುಸ್ತಕ ಬಿಡುಗಡೆಯ ಸಂದರ್ಭವನ್ನು ನೆನೆದು)

ಪ್ರಪಂಚ ಪರ್ಯಟನೆ

- ಮಂದಗೆರೆ ನಾಗೇಶ್

ದೇವರಾಜ ಮಾರ್ಕೆಟ್ ಎದುರಿಗಿರೊ ಚಿಕ್ಕ ಗಡಿಯಾರ ಆರು ಗಂಟೆ ತೋರ್‍ಸೊದಕ್ಕೂ ನಾನು ಶೇಶ, ಶ್ರೀನಿ, ಶಿವು ಎಲ್ಲ ತಾತಯ್ಯನವರ statue ಅಭಿಮುಖವಾಗಿರೊ light ಕಂಬದ ಹತ್ತಿರ ಬರೋದುಕ್ಕೂ ಸರಿಹೋಯಿತು. ಇದೊಂದು ಕಳೆದ ಹಲವು ವರ್ಷಗಳಿಂದ ನಡೆದುಕೊಂಡ ಬಂದ Punctual Routine ಉ. ಇದು ಶುರುವಾದದ್ದು ನನಗಿನ್ನು ಚೆನ್ನಾಗಿ ನೆನಪಿದೆ. ಅವತ್ತು ಹೊರಗೆ ಧೋ ಅಂತ ಮಳೆ ಸುರಿತಿತ್ತು. ಗುಡುಗು ಮಿಂಚುಗಳ ಆರ್ಭಟ. ನಾವು ನಾಕು ಜನ ಅಂತಿಮ ಬಿ.ಎ. ತರಗತಿಯ ಕೊನೆ ಬೆಂಚಿನಲ್ಲಿ ಮುದುರಿ ಕೂತಿದ್ವಿ. ನಮ್ಮ ಕನ್ನಡ ಮೇಷ್ಟು ನಿರರ್ಗಳವಾಗಿ ಯಾವುದೊ ಪಾಠ ಮಾಡುತ್ತಿದ್ದರು. ನಾನು ಶೇಶ, ಶಿವು ಮೂವರು ಮಾಡಿನಿಂದ ತೊಟ್ಟಿಕ್ಕುತ್ತಿದ್ದ ಹನಿಗಳನ್ನು ಲೆಕ್ಕ ಮಾಡುತ್ತಿದ್ದೆವು. ಶ್ರೀನಿ ಮಾತ್ರ ಅದೇನೋ ಅಪರೂಪಕ್ಕೆ ತದೇಕ ಚಿತ್ತದಿಂದ ಪಾಠ ಆಲಿಸುತ್ತಿದ್ದ. ಇದ್ದಕ್ಕಿದ್ದ ಹಾಗೆ ಕನ್ನಡ ಮೇಷ್ಟ್ರು ''ಇಲ್ಲೇನ್ ಕಲಿತಿರೊ ಮುಂಡೆವ ನಾಕ್ ಕಡೆ ತಿರುಗಿ ಪ್ರಪಂಚ ನೋಡಿ ಕಲೀರಿ'' ಎಂದು ಹೇಳುತ್ತಿದ್ದಂತೆ, ಅರ್ಜುನ ನೀರು ನೋಡಿ ಬಿಟ್ಟ ಬಾಣ ಮೀನಿನ ಕಣ್ಣಿಗೆ ನಾಟಿದಂತೆ ಅವರ ಮಾತು ಶ್ರೀನಿ ತಲೆಗೆ ಹೊಕ್ಕು ಅವನ Zero Candle Bulb ನ ಮುಖ 100 Candle Bulb ತರ ಬೆಳಗಿ ಅದರ ಶಾಖಕ್ಕೆ ನಮಗೆಲ್ಲ ಆ ಚಳಿಯಲ್ಲೂ ಬೆವರು ಬಂತು. ಕ್ಲಾಸ್ ಮುಗಿಯುತ್ತಿದ್ದ ಹಾಗೆ ಶ್ರೀನಿ ಪ್ರವಚನ ಶುರುಮಾಡಿದ. ''ಕೇಳಿದ್ರೇನೊ CNR ಹೇಳಿದ್ದು ಕಾಲೇಜಿನಲ್ಲಿ ಪಾಠ ಕೇಳೋಕ್ಕಿಂತ ನಾಕ್ ಕಡೆ ಸುತ್ತಿ ಜ್ಞಾನ ಬರುತ್ತೆ ಅಂತೆ ಕಣೋ ಅವರ ಮಾತಿನ ಅರ್ಥ. ಇವತ್ತಿನಿಂದ ನಾವು ದಿನ ಇಂದಿಷ್ಟು ಪ್ರಪಂಚ ಸುತ್ತೋಣ'' ಅಂತ ಒದರಿದ.

ನಮಗೂ ಏನೋ ಹೊಸ ಉತ್ಸಾಹ ಯಾಕಂದ್ರೆ ''ಇವತ್ತಿನಿಂದ Combined Study ಮಾಡೋಣ'' ಅಂತ ಅಂತಾನೆ ಅನ್ಕೊಂಡಿದ್ವು.

''ಸರಿ ಏನ್ ಮಾಡು ಅಂತ್ಯ ಗುರು'' (ಆಗ್ಲಿಂದ್ರೆ, ನಾವು ಶ್ರೀನಿನ ಗುರು ಅಂತ ತೀರ್ಮಾನ ಮಾಡಿದ್ದು) ಶಿವು ಕೇಳಿದ.

''ಹೇಳಿದ್ನಲ್ಲ ಪ್ರಪಂಚ ಸುತ್ತೋಣ ಅಂತ'' ಗುಡುಗಿದ ಶ್ರೀನಿ. ಆಚೆ ಮಳೆ ನಿಂತಿತ್ತು.

''ಸರಿ ಅದಕ್ಕೆ ಒಂದು Starting Point ಬೇಕು ಎಲ್ಲಿಂದ ಶುರು ಮಾಡೋಣ'' ಶೇಶ ಪ್ರಶ್ನಿಸಿದ.

"Good Question ಸುಮ್ಮನೆಲ್ಲಿಂದರಲ್ಲಿ ಸುತ್ತೋಕೆ ಆಗೋಲ್ಲ, Let us decide the Starting Point" ಅಂದ ಶ್ರೀನಿ.

ಸುಮಾರು ಹೊತ್ತು Discussion ನಡೆದ ನಂತರ ತಾತಯ್ಯನವರ Statue ನಮ್ಮ Starting Point ಅಂತ ಶ್ರೀನಿ ತೀರ್ಮಾನಿಸಿದ. ಅವತ್ತಿನಿಂದ ಅಂದ್ರೆ ವಿಕ್ರಮ ಸಂವತ್ಸರದ ಶ್ರಾವಣ ಮಾಸದ ಶುಕ್ಲ ಪಕ್ಷ ಪಂಚಮಿ ದಿವಸ ಶುರುವಾದ ನಮ್ಮ ಈ ಜ್ಞಾನ ಸಂಪಾದನೆ ಇವತ್ತಿಗೂ ಅಂದ್ರೆ ಸ್ವಭಾನು ಸಂವತ್ಸರ ಭಾದ್ರಪದ ಮಾಸ ಕೃಷ್ಣ ಪಕ್ಷ ಚತುರ್ದಶಿ ತನಕ ನಿರಂತರವಾಗಿ ಸಾಗಿದೆ. ಈ ಅವಧಿಯಲ್ಲಿ ನಮಗೆ ಅನೇಕ ಜ್ಞಾನ ಸಂಪಾದನೆಯಾಯಿತು. ಉದಾಹರಣೆಗೆ MNC ಮಲ್ಲಿಗೆ ಇಡ್ಲಿ, ರಾಜು ಹೋಟೆಲ್ ಬೆಣ್ಣೆ ದೋಸೆ, ಮೂಕಾಂಬಿಕಾದ ವಡೆ ಸಾಂಬಾರ್, ಇಂದ್ರ ಭವನದ ಉಪ್ಪಿಟ್ಟು, ಕಾಮತ್ ಹೋಟೆಲಿನ ಕಾಫಿ, Ist Main ಸುಬ್ಬಣ್ಣನ ಬೋಂಡ, ವಾದಿ ವಡೆ... ಇವುಗಳ ಮುಂದೆ ಪ್ರಪಂಚದ ಯಾವುದೇ ವಸ್ತು ಸರಿಸಮವಾಗಲಾರದು ಅನ್ನೊ ಸತ್ಯ ಮನದಟ್ಟಾಗಿದ್ದು ಈ ಅವದಿಯಲ್ಲೇ. ಪ್ರಭ, ಸರಸ್ವತಿ,. ಶಾಂತಲಾ, ಗಾಯತ್ರಿ, ಗಣೇಶ, ಇನ್ನೂ ಅನೇಕಾನೇಕ ಚಿತ್ರ ಮಂದಿರಗಳು ನಮಗೆ ಪ್ರಪಂಚವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಹಕರಿಸಿದವು. ನಮ್ಮ ಜ್ಞಾನದ ಪರಿಧಿಯನ್ನು ವಿಸ್ತಾರಗೊಳಿಸಿದವು. ಇವತ್ತು ಸಹ ಅಂತಹ ಸತ್ಯ / ಜ್ಞಾನದ ಸಂಪಾದನೆಗಾಗಿ ಎಂದಿನಂತೆ ನಾವು ನಾಕೂ ಜನ ತಾತಯ್ಯನವರ Statue ಬಳಿ ಬಂದಿದ್ದು.

''ಯಾವ್ ಕಡೆ ಹೋಗೋಣ ಗುರು'' ಶಿವು ಕೇಳಿದ. ''ಹೀಗೆ ಹೋಗ್ತಾ Decide ಮಾಡೋಣ Lets not waste the time'' ಶ್ರೀನಿ ಘನ ಗಾಂಭೀರ್ಯದಿಂದ ನುಡಿದ.

ಸರಿ ಎಲ್ಲರೂ ಕೆ.ಆರ್. ಸರ್ಕಲ್ ದಾಟಿ ಇಂದ್ರಭವನ್ ಹತ್ತಿರ ಆಗುತ್ತಿದ್ದಂತೆ ಉಪ್ಪಿಟ್ಟಿನ ಘಮ ಮೂಗಿಗೆ ಬಡಿಯತೊಡಗಿತು.

ಶೇಶ ''ಲೋ ಮಧ್ಯಾಹ್ನ ಊಟ ಸರಿಯಾಗಿ ಆಗಿಲ್ಲ, ಏನೇರಾ ಹೊಟ್ಟೆಗೆ ಹಾಕೊಂಡು ಹೊಗೋಣ ಕಂಡ್ರೊ'' ಅಂತ Clever reason & proposal ಕೊಟ್ಟ.

''ಸರಿ'' ಎಂದು ಶ್ರೀನಿ ಇಂತ Proposalಗೆ ಕಾಯುತ್ತಿದ್ದವನಂತೆ ಇಂದ್ರಭವನ್ ಒಳಗೆ ನುಗ್ಗಿದ. Not to mention ನಾವೆಲ್ಲ ಕುರಿತರ ಅವನ ಹಿಂಬಾಲಿಸಿದೆವು. ಎಂದಿನಂತೆ ಕೊನೆಯ ಟೇಬಲ್‌ನಲ್ಲಿ Settle ಆಗೋಕೂ, ಮಾಣಿ ಬರೋದಕ್ಕೂ ಸರಿಹೋಯಿತು.

''ಏನ್ ಕೊಡ್ಲಿ ಸಾರ್'' ಪರಿಚಯದ ನಗು ಬೀರಿದ.

"To Start with ನಾಕ್ ಉಪ್ಪಿಟ್ಟು, Two By Four ಬಜ್ಜಿ, ಚಟ್ನಿ ಎರಡ್ ಕಪ್ Extra ಇರ್‌ಲಿ'' ಶೇಶ ಆರ್ಡರ್ ಕೊಟ್ಟ.

''ಲೋ ನಾಣಿ ಇಂದ್ರಭವನ್ ಶುರುವಾದದ್ದು ಹತ್ತೊಂಬತ್ ನೂರ ಎರಡರಲ್ಲಿ ಕಣೋ'' ಶ್ರೀನಿ ನನಗೆ Teasing Line ನಲ್ಲಿ Bowl ಮಾಡಿದ. ಇವನ ಮಾತೇ ಒಳ್ಳೆ Quick Sand ತರ, ಮಾತು ಬೆಳೆಸಿದಷ್ಟು ಸಿಕ್ಕಿ,ಹಾಕಿಕೊಳ್ಳುತ್ತಿರುತ್ತೀವಿ.

''ಇರಬಹುದು'' Safe ಆಗಿ ಆಡಲು ತೀರ್ಮಾನಿಸಿದೆ.

''ಇರಬಹುದು ಏನು ಹತ್ತೊಂಬತ್ತಾನೂರ ಎರಡರಲ್ಲೇ, ಇದರ ಮೊದಲ ಹೆಸರು ಚಂದ್ರಭವನ್ ಅಂತ ಗೊತ್ತಿತ್ತೇನ್ರೋ'' ಈ ಸರ್ತಿ ಎಲ್ಲರಿಗೂ ಪ್ರಶ್ನೆ ಎಸೆದ.

ನಾವೆಲ್ಲಾ ಸುತ್ತಾಮುತ್ತಾ ಗೋಡೆ ಗಮನಿಸಿದೆವು. ಎಲ್ಲಾದ್ರೂ ಬರೆದಿರಬಹುದೇ ಎಂದು.

''ಸುತ್ತಾಮುತ್ತಾ ಏನ್ ನೋಡ್ತೀರೋ ಬಕರಾಗಳ ತರ, ಅದೊಂದು ದೊಡ್ಡ ಕಥೆ ಅದನ್ನ Precise ಆಗಿ ಹೇಳ್ತೀನಿ ಕೇಳಿ'' ಎಂದ ಶ್ರೀನಿ. ಅಷ್ಟೊತ್ತಿಗೆ ಉಪ್ಪಿಟ್ಟು ಬಂತು.

ಶ್ರೀನಿ ಕಥೆ ಶುರು ಮಾಡಿದ. ''ಹತ್ತೊಂಬತ್‌ನೂರ ಎರಡ್‌ನೇ ಇಸವಿ, ಚೈತ್ರ ಮಾಸದ ಒಂದ್ ದಿನಾ ಆಗಿನ್ನೂ ಒಂದೋ ಎರಡೋ ತಿಂಗಳಾಗಿತ್ತು ಈ ಹೋಟೆಲ್ ಶುರು ಆಗಿ ಆಗ ಚಂದ್ರಭವನ್ ಅಂತ ನಾಮಕರಣ ಮಾಡಿದ್ರು. ಅವತ್ತು ಇದೇ ಟೇಬಲ್‌ನಲ್ಲಿ ನಾಣಿ ಕೂತ ಜಾಗದಲ್ಲಿ ಒಬ್ಬ ವ್ಯಕ್ತಿ ಬಂದು ಕೂತ''

''ಯಾರೋ ಅವನು'' ಶಿವೂ ಪ್ರಶ್ನಿಸಿದ.

ಶ್ರೀನಿಗೆ ನಖಶಿಖಾಂತ ಕೋಪ ಬಂತು. ಅವನಿಗೆ ಮಧ್ಯ ಬಾಯಿ ಹಾಕಿದರೆ ಹಾಗೋಲ್ಲ.

''ಸ್ವಲ್ಪ ತಾಳ್ಮೆ, ಇರಲಿ ಶಿವೂ. ನೀನ್ Continue ಮಾಡೋ ಶ್ರೀನಿ'' ಪರಿಸ್ಥಿತಿ ಹದಕ್ಕೆ ತಂದೆ.

''ಏನಾರಾ ಪ್ರಶ್ನೆ ಅಥವಾ ಅನುಮಾನ ಇದ್ರೆ ಕೊನೇಲಿ ಕೇಳಿ ಮಧ್ಯದಲ್ಲಿ Disturb ಮಾಡಬೇಡಿ. ಸರಿ ನಾನು ಏನ್ ಹೇಳ್ತಾಯಿದ್ದೆ, ಹಾ ಒಬ್ಬ ವ್ಯಕ್ತಿ ಬಂದು ನಾಣಿ ಕೂತ ಜಾಗದಲ್ಲಿ ಕೂತ. ಅವನ ಮುಖದಲ್ಲಿ ಅಗಾಧವಾದ ತೇಜಸ್ಸಿತ್ತು. ಘಂಟೆ ಸಂಜೆ 7.00 ಆಗಿತ್ತು. ಆಗಿನ ಕಾಲದಲ್ಲಿ ಸಂಜೆ ಏಳರಿಂದ ಹತ್ತು ಘಂಟೆ ತನಕ K.E.B. ಯವರ Load Shedding ಇತ್ತು. ಆದ್ರೆ ಅವತ್ತು ಅದರ ಅನುಭವ ಅಲ್ಲಿದ್ದ ಯಾರಿಗೂ ಆಗಲಿಲ್ಲ K.E.B. ಯವರು ಸರಿಯಾಗಿ ಏಳು ಗಂಟೆಗೆ Power Cut ಮಾಡಿದರು. ಆ ವ್ಯಕ್ತಿಯ ಮುಖದ ದಿವ್ಯ ತೇಜಸ್ಸು ಇಡೀ ಹೋಟೆಲ್ ತುಂಬಿಕೊಂಡಿತ್ತು. Waiter ಸುಬ್ಬಣ್ಣ ಒಂದ್ ಲೋಟ ನೀರಿಟ್ಟು ''ಏನ್ ಕೊಡಲಿ ಸ್ವಾಮಿ'' ಎಂದ. ತಕ್ಷಣ ಆ ವ್ಯಕ್ತಿ ಹಿಂದೂ ಮುಂದೂ ನೋಡದೆ ''ಉಪ್ಪಿಟ್ಟು'' ಅಂತ Order ಮಾಡಿದ. ಸರಿ ಮಾಣಿ ಒಂದ ಪ್ಲೇಟ್ ಉಪ್ಪಿಟ್

ತಂದಿಟ್ಟ, ಒಂದ್ ಪ್ಲೇಟ್ ಉಪ್ಪಿಟ್ ಅಂದ್ರೆ, ಈಗ ಕೊಡ್ತಾರಲ್ಲ ಸಾಸ್ವೆ ಡಬ್ಬಿ ಮುಚ್ಚಳದಷ್ಟಲ್ಲ. ಇದರ ಹತ್ತು ಪಟ್ಟು ದೊಡ್ಡದಿತ್ತು. ಸರಿ ಆ ವ್ಯಕ್ತಿ ಸಾವಧಾನವಾಗಿ ಕಾಯಿ ಚಟ್ನಿ ಜೊತೆ ನೆಂಚಿಕೊಂಡು ತಿನ್ನತೊಡಗಿದ,. ರುಚಿ ಹತ್ತತೊಡಗಿತು. ಒಂದಾದ ಮೇಲೊಂದರಂತೆ ಉಪ್ಪಿಟ್ಟು Order ಮಾಡತೊಡಗಿದ. ಮೊದ ಮೊದಲು ಮಾಣಿ ಸುಬ್ಬಣ್ಣ ಇದೆಲ್ಲ ಮಾಮೂಲು ಅನ್ನುವಂತೆ Supply ಮಾಡತೊಡಗಿದ. ಆದರೆ ಐದಾಯ್ತು, ಹತ್ತಾಯ್ತು, ಹದ್‌ನೈದಾಯ್ತು. ಇನ್ನೂ ಆ ವ್ಯಕ್ತಿ ಬೇಕು ಬೇಕು ಅಂತಿದ್ದಾ ಹೊರತು ಸಾಕು ಅನ್ನೋ ಸೂಚನೆ ಕಾಣಲಿಲ್ಲ. ಅಂತ ದಡೂತಿ ಅಸಾಮಿ Waiter ಸುಬ್ಬಣ್ಣ ಅಡಿಗೆ ಮನೆಗೂ ಆ ವ್ಯಕ್ತಿ Tableಗೂ ಓಡಾಡಿ ಒಂದ್ ಕೆ.ಜಿ. ಕಡಿಮೆಯಾದ. ಆದ್ರೂ, ಆ ವ್ಯಕ್ತಿ ಉಪ್ಪಿಟ್ಟು ದಾಹ ಕಡಿಮೆಯಾಗಲಿಲ್ಲ. ಕಡೆಗೆ ಅಡಿಗೆ ಭಟ್ಟ ಭೀಮಭಟ್ಟನಿಗೂ ಕೈ ಸೋತಿತ್ತು. ''ಇನ್ ನನ್ನ ಕೈಲಿ ಆಗೋಲ್ಲ'' ಅಂತ ಸೌಟ್ ಬಿಸಾಟ. Waiter ಸುಬ್ಬಣ್ಣನಿಗೂ ಈ ಓಡಾಟ ಸಾಕಾಗಿತ್ತು. ಕೊನೆಗೆ ಈ ವಿಚಾರವನ್ನು ಗಲ್ಲದ ಮೇಲೆ ಕೂತಿದ್ದ ಧಣಿ ನಾರಾಯಣ್‌ರಾವ್ ಅವರ ಗಮನಕ್ಕೆ ತಂದ. ಅವರೂ ಇದನ್ನೆಲ್ಲ ಗಮನಿಸಿದ್ರು! ಅವರಿಗೂ ಯಾಕೋ ಇದು ವಿಚಿತ್ರ ಅನ್ನಿಸ್ತು. ಸರಿ ಆ ವ್ಯಕ್ತಿಯ ಹತ್ತಿರ ಹೋದ ಅವರಿಗೆ ಇದ್ದಕ್ಕಿದ್ದಂತೆ ಏನೋ ಒಂತರಾ ಭಯ, ಭಕ್ತಿ ಇನ್ನೂ ಏನೇನೋ ಎಲ್ಲಾ ಒಟ್ಟಿಗೆ ಅನುಭವ ಆಯ್ತು.

''ಮಹಾಸ್ವಾಮಿ, ತಾವು ಯಾರೋ ದೊಡ್ಡವರು. ತಾವು ಖಂಡಿತ ಮನುಷ್ಯರಲ್ಲ. ದಯವಿಟ್ಟು ನಿಮ್ಮ ಮೂಲ ರೂಪಕ್ಕೆ ಬಂದು ಉದ್ಧಾರ ಮಾಡಬೇಕು ಅಂತ ಆ ವ್ಯಕ್ತಿಯ ಕಾಲಿಗೆ ಬಿದ್ದರು. ಇವರ ಭಕ್ತಿಯ ನೋಡಿದ ಆ ವ್ಯಕ್ತಿ ತನ್ನ ಮೂಲ ರೂಪಕ್ಕೆ ಬಂದ.''

''ಯಾರೋ ಅದು'' ಇಲ್ಲಿಯವರೆಗೆ ಬಾಯ ಬಿಟ್ಟಿರದ ಶೇಶ ಕೇಳಿದ. But ಈ ಸರ್ತಿ ಶ್ರೀನಿ ಸಿಟ್ಟಾಗಲಿಲ್ಲ. ''ಇಂದ್ರ ಕಣೋ! ಚಂದ್ರಭವನ್ ಉಪ್ಪಿಟ್ಟಿನ ಮಹಿಮೆ ಕೇಳಿ ಸಾಕ್ಷಾತ್ ಇಂದ್ರ ಧರೆಗಿಳಿದು ಬಂದಿದ್ದ. ತನ್ನ ಮೂಲ ರೂಪಕ್ಕೆ ಬಂದು ಎಲ್ಲರಿಗೂ ಆಶೀರ್ವಾದ ಮಾಡಿ, ಇನ್ನು ಮುಂದೆ ಈ ಹೋಟೆಲ್‌ಗೆ ಇಂದ್ರಭವನ್ ಅಂತ ಹೆಸರಿಡು ಚೆನ್ನಾಗಿ ಉದ್ಧಾರವಾಗುತ್ತೆ'' ಅಂತ ಹರಸಿ ಅಂತರ್ಧಾನನಾದ. ಅವತ್ತಿನಿಂದ ಇದಕ್ಕೆ ಇಂದ್ರಭವನ್ ಹೆಸರು ಖಾಯಂ ಆಯ್ತು'' ಶ್ರೀನಿ ಕಥೆ ಮುಗಿಸಿ ನಮ್ಮ ಮುಖ ನೋಡಿದ.

''ಲೋ ಬುರುಡೆ ಬಿಡಬೇಡ ಇಂದ್ರ ಬಂದಿದ್ದು ನೀನ್ ನೋಡಿದ್ಯಾ? ಎಲ್ಲಾ ಸುಳ್ಳು ಬಿಡೋ'' ಶಿವೂ ಹಗೂರವಾಗಿ ಹೇಳಿದ. ನನಗೂ ಹಾಗೆ ಅನ್ನಿಸ್ತು.

''ಶಿವೂ I bet you ಈಗ್ಲೂ ಅದಕ್ಕೆ Evidence ಇದೆ. ನೋಡೋ ಈ ಕೋಣೆ ಕಾಣುತ್ತಿದೆಯಲ್ಲಾ ಅದೇ ಬಲಭಾಗದ ಮೂಲೆಯಲ್ಲಿದೆಯಲ್ಲಾ, ಅಲ್ಲಿ ದಿನಾ ಮಡಿಯಲ್ಲಿ ಉಪ್ಪಿಟ್ಟು ಮಾಡಿ ಒಂದ್ ಡಬರಿ ಉಪ್ಪಿಟ್ಟು ಇಟ್ಟು ಬೀಗ ಹಾಕ್ತಾರೆ. ಬೀಗ ತೆಗೆಯೋದು

ಮಾರನೇ ದಿನ ಮುಂಜಾನೆ ಆರು ಘಂಟೆಗೇನೇ. ಆಗ ಅಲ್ಲಿ ಖಾಲಿ ಡಬರಿ ಇರುತ್ತೆ. ಇಂದ್ರ ಬಂದು ಪ್ರಸಾದ ಸ್ವೀಕರಿಸಿರುತ್ತಾನೆ ಗೊತ್ತಾಯ್ತಾ.''

ಅಷ್ಟರಲ್ಲಿ ಮಾಣಿ ಬಿಲ್ ತಂದಿಟ್ಟ. ಘಂಟೆ ಒಂಭತ್ತಾಗಿತ್ತು. ಸರಿ ಎಲ್ಲರೂ ಎದ್ದೆವು. ಹೊರ ಹೋಗಬೇಕಾದರೆ ಬಲಭಾಗದಲ್ಲಿದ್ದ ಮೂಲೆಯ ಕೋಣೆಯ ಬಾಗಿಲು ಸ್ವಲ್ಪ ಅಲುಗಾಡಿದ ಶಬ್ದ ಕೇಳಿಸಿತು. ನನಗ್ಯಾಕೋ ಸಣ್ಣ ಅನುಮಾನ ಶುರುವಾಯ್ತು.

''ಒಳಗೆ ಇಂದ್ರ ಉಪ್ಪಿಟ್ಟು ತಿನ್ನುತ್ತಿರಬಹುದೇ?''

''ಬಾರೋ ನಾಣಿ ಲೇಟ್ ಆಯ್ತು'' ಶ್ರೀನಿ ಕರೆದ. ಸರಿ ಅವತ್ತಿನ ನಮ್ಮ ಪ್ರಪಂಚ ಪರ್ಯಟನೆ ಮುಗಿಸಿ ನಮ್ಮ ನಮ್ಮ ಮನೆಯ ಕಡೆಗೆ ಹೆಜ್ಜೆ ಹಾಕಿದೆವು.

★★★



''ಬರಹಗಾರರ ಸ್ವರ್ಗ''

ಹಲವು ಹನಿಗವನ

- ಕಮಲಾ ರಾಮಸ್ವಾಮಿ

ನವ್ಯ ಕವಿ

ಎಡ ಹೆಗಲಿಗೆ ತೂಗು ಚೀಲ
ಕುರುಚಲು ಗಡ್ಡ, ಜುಬ್ಬಾಧಾರಿ
ನಿರಾಶೆ, ನೀರಸ ಕಳಾಹೀನ ವದನ
ಅವನೇ। ಕಾಸಿಲ್ಲದ ಕನ್ನಡದ ನವ್ಯಕವಿ - 'ಮದನ'॥

ಸಂಸಾರ - ಗುಟ್ಟು

ರವಿ ಕಾಣದ್ದನ್ನು ಕವಿ ಕಂಡ
ಕವಿ ನುಡಿದ ಸತ್ಯ ಅಖಂಡ
'ಕಮಲ' ಕಾಣದ್ದನ್ನು 'ಹಸ್ತ' ಕಂಡಿತು
'ಹಸ್ತಕ್ಕೆ' ತಿಳಿಯದ್ದನ್ನು 'ಕಮಲ' ಹುಡುಕಿತು
ಪ್ರಜಾ - ಪ್ರಭುತ್ವದ ಧುರೀಣರಿಗೆ ತಿಳಿಯದು
ಕನ್ನಡದ ನಡುಗಟ್ಟು ''ಸಂಸಾರ ಗುಟ್ಟು, ವ್ಯಾಧಿ ರಟ್ಟು''

ಪ್ರಾಸಗಳ ತ್ರಾಸ

ಪದಗಳ ಗುಂಪಿನ ಗದ್ದಲ
ನವ್ಯ ಕವಿಯ ಕವನದ
ಅರ್ಥವದೇನೆಂದರು - ತಿಳಿದವರು।
ಕಾವ್ಯ ಸ್ಫೂರ್ತಿಯ ದಾಸ
ಬರೆವಾಗ ಹೊಳೆವುದು
ತತ್ವಾರ್ಥದ ಪರಿಭ್ರಮಣ।
ಕೇಳಿ ಅವನು ಅವರೆಂದರು
''ನಿನ್ನ ತಲೆ, ನಿನಗಾಗಿದೆ ಮತಿ ಭ್ರಮಣ''॥

ಚುನಾವಣೆ

ಗೊಟಾಲಗಳ ಸಮಸ್ಯೆ
ಹಿಂದೂತ್ವದ ರಹಸ್ಯ
ಗನ್ನುಗಳ ಕೊಳ್ಳಾಟ
ದೇಸೀ ಬೇಟಿ, ವಿದೇಸಿ ಬಹೂ
ಇವರುಗಳ ಸೆಣಸಾಟ
ಯಾರಿಗೆ ಬೇಕು ಈ ಕಾಟ
ಹೊಟ್ಟೆಗಿಲ್ಲದ ದೇಶದ ಜುಟ್ಟಿಗೆ
ಮಲ್ಲಿಗೆಯ ಮುಡಿಸಾಟ॥

ಮಂಗಳ

(ಪುರಂದರ ದಾಸರ ಕ್ಷಮೆ ಕೋರಿ)

– ಧೃತಿ

ಜಯ ಮಂಗಳಂ ನಿತ್ಯ ನಗೆ ಮಂಗಳಂ ॥ಪಲ್ಲವಿ॥

1. ಮಂಗಳವು ದುಃಖ ದುಮ್ಮಾನ ಧ್ವಂಸನಿಗೆ
ಮಂಗಳವು ಶತಕೋಟಿ ಹಾಸ್ಯ ಪ್ರಜ್ಞನಿಗೆ
ಮಂಗಳವು ಆ ಹಾಸ್ಯಾನಂದ ತುಂದಿಲಗೆ
ಮಂಗಳವು ಹೊಟ್ಟೆ ಬಿರಿದು ನಗಿಸುವ ನೃಸಿಂಹನಿಗೆ

॥ ಜಯ ಮಂಗಳಂ ॥

2. ಮಾತು ಮಾತಿಗೆ ನಗೆಯ ಹೊನಲ ಹರಿಸುವವನಿಗೆ
ನಗೆಯ ಸಿರಿವದನವ ತೋರ್ಪ ಸಿರಿವಂತಗೆ
ಮಂಗಳದ ನಗುತುಂಬಿ ಚೆಲ್ಲುವ ಚೆಲುವನಿಗೆ
ಕಾಸು ಬಿಚ್ಚದೆ ನಗುವ ನವಕೋಟಿ ನಾರಾಯಣಗೆ

॥ ಜಯ ಮಂಗಳಂ ॥

3. ನಗೆಯ ಕಚಗುಳಿ ಇಡುತ ಮಾತಾಡೊ ಮನದವಗೆ
ವಿಧ ವಿಧದ ನಗುಗಳ ಪಡೆದೊಡೆಯಗೆ
ಹಾಸ್ಯ ವತ್ಸಲನಿಗೆ ದುಃಖರೋಗ ವೈದ್ಯನಿಗೆ
ಸಕಲ ಜೀವಿಗಳಿಗೆ ನಗೆ ದಯಪಾಲಿಸುವವನಿಗೆ

॥ ಜಯ ಮಂಗಳಂ ॥

4. ನಕ್ಕು ಮನಸನು ಹಗುರ ಮಾಡಿಕೊಳ ಬಯಸುವಗೆ
ನಗುವಿನಿಂದಲೆ ಮನವ ತುಂಬಿಕೊಳ್ಳುವನಿಗೆ
ಮಂಗಳವು ಬತ್ತೀಸ ಹಲ್ಲುಗಳ ತೋರುವಗೆ
ಮಂಗಳವು ಮೌನದಲೆ ನಗುವ ಸಜ್ಜನನಿಗೆ

॥ ಜಯ ಮಂಗಳಂ ॥


STRIKING POWER
Down Hole Hammers
&
Button Bits

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR